ಹಂಪಿ ಟೈಮ್ಸ್
HAMPI TIMES
KANNADA DAILY
ಕನ್ನಡ ದಿನಪತ್ರಿಕೆ
ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026
ಸಂಪುಟ:02 Volume:02 • ಸಂಚಿಕೆ: 252 Issue: 252 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 12.04.2025 • ಶನಿವಾರ Saturday • ಪುಟ:04 Page:04 • ಬೆಲೆ:2 Rs:2

Good Opportunity for Branding
1,25,000+
Digital E-PAPER READERS
No.1 HAMPI TIMES LEADING PRINT & DIGITAL District News Paper
Call Us for Advertisements: 9448633038

# ನೋಡ ಬನ್ನಿ ಪಂಪಾ ವಿರೂಪಾಕ್ಷ ರಥೋತ್ಸವ

## ಹಂಪಿಯಲ್ಲಿ ಫಲಪೂಜೆಯಂದು ಶಿವ-ಪಾರ್ವತಿಗೆ ನಿಶ್ಚಿತಾರ್ಥ, ದವನದ ಹುಣ್ಣಿಮೆಗೆ ವಿವಾಹ ಬಳಿಕ ರಥೋತ್ಸವ

## ದೇವಲೋಕವೇ ಧರೆಗಿಳಿದು ಹಂಪಿ ರಥೋತ್ಸವ ಕಣ್ತುಂಬಿಕೊಂಡ ಕ್ಷಣಗಳನ್ನ 600 ವರ್ಷಗಳ ಹಿಂದೆಯೇ ಅಹೋಬಲನಿಂದ ದಾಖಲು

■ ಎಂ.ಎಂ.ಶಿವಪ್ರಕಾಶ ಹೊಸಪೇಟೆ

ಹಂಪಿ ಧಾರ್ಮಿಕ, ಸಾಂಸ್ಕೃತಿಕ ಹಾಗೂ ಚಾರಿತ್ರಿಕ ಪರಂಪರೆಯ ನೆಲ. ಪಂಪಾ ಕ್ಷೇತ್ರ, ಪಂಪಾಪುರ ಎಂದು ಕರೆಯಲಾಗಿದೆ. ಪಂಪಾ ಕ್ಷೇತ್ರವು ಕಾಶಿ ಕ್ಷೇತ್ರಕ್ಕೆ ಸಮಾನವಾಗಿದ್ದು, ಕಾಶಿ ವಿಶ್ವೇಶ್ವರನೇ ಪಂಪಾ ವಿರೂಪಾಕ್ಷನೆಂದು, ಪಂಪಾನದಿಯೇ ಜಾಹ್ನವಿ ಎಂದು, ಹಂಪಿ ಹೊಳೆ ಗಂಗಾ ನದಿಗೆ ಸಮಾನವೆಂದು ಸಪ್ತ ಋಷಿಗಳಿಂದ ಹೊಗಳಿಸಿಕೊಂಡಿದೆ.




ಹೀಗಾಗಿ ದಕ್ಷಿಣದ ಕಾಶಿ ಹಂಪಿ ಎಂದು ಜನರು ನಂಬಿಕೊಂಡು ವಿರೂಪಾಕ್ಷನನ್ನು ಪೂಜಿಸುತ್ತಿದ್ದಾರೆ. ಪ್ರಾಕೃತಿಕ ಸೌಂದರ್ಯ ಮತ್ತು ಐತಿಹಾಸಿಕ ಪರಂಪರೆಯನ್ನು ಹೊಂದಿರುವ ಸ್ಥಳ. ನಿಸರ್ಗ ನಿರ್ಮಿತ ಬೆಟ್ಟ ಗುಡ್ಡಗಳ ಮಧ್ಯೆ ಸದಾ ಹರಿಯುವ ನದಿಯ ಮಡಿಲಲ್ಲಿ ಈ ಪಂಪಾ ಕ್ಷೇತ್ರ ಇದೆ. ವಿಜಯನಗರ ಪೂರ್ವ ವಿಜಯನಗರ ಸಾಮ್ರಾಜ್ಯ ಹಾಗೂ ವಿಜಯನಗರದ ನಂತರ ಹಂಪಿ ತನ್ನ ಧಾರ್ಮಿಕ ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿ ಬೆಳೆಸಿಕೊಂಡು ಬಂದಿದೆ. ಈ ಧಾರ್ಮಿಕ ಸಾಂಸ್ಕೃತಿಕ, ಚಾರಿತ್ರಿಕ ನೆಲದಲ್ಲಿ ಪುರಾಣ ಇತಿಹಾಸ ಸಂಸ್ಕೃತಿಗಳ ಸಂಗಮದ ಪಂಪಾ ವಿರೂಪಾಕ್ಷ ರಥೋತ್ಸವದ ಸಂಭ್ರಮ.

ಪೌರಾಣಿಕವಾಗಿ, ಸಾಂಸ್ಕೃತಿಕವಾಗಿ ಹಾಗೂ ಚಾರಿತ್ರಿಕವಾಗಿರುವ ಕನ್ನಡ ನಾಡಿನ ಅತಿ ಪ್ರಾಚೀನ ಧಾರ್ಮಿಕ ಪರಂಪರೆಯ ಕ್ಷೇತ್ರಗಳಲ್ಲಿ ಹಂಪಿ ಪ್ರಮುಖವಾದ ಸ್ಥಳವಾಗಿದೆ. ಪಾರ್ವತಿ ಶಿವನನ್ನ ಪಡೆಯಲು ತಪಸ್ಸು ಮಾಡಿದಾಗ ಹೇಮಕೂಟದಲ್ಲಿ ಶಿವ ಪ್ರತ್ಯಕ್ಷನಾಗಿದ್ದು, ಶಿವ ಪಾರ್ವತಿಯರ ಕಲ್ಯಾಣೋತ್ಸವ ನಡೆದಿದ್ದು ಇದೇ ಹೇಮಕೂಟದಲ್ಲಿ. ಹೀಗಾಗಿ ಇದು ಶಿವ ಪ್ರಧಾನವಾದ ಪುಣ್ಯ ಕ್ಷೇತ್ರ. ಪಾರ್ವತಿಯನ್ನು ಪಂಪಾಂಬಿಕೆ, ಹಂಪಮ್ಮ ಎಂದೂ ಶಿವನನ್ನು ಪಂಪಾಪತಿ, ವಿರೂಪಾಕ್ಷನೆಂದು ಜನಸಾಮಾನ್ಯರು ಕರೆದುಕೊಂಡು ಬಂದಿದ್ದಾರೆ. ಪಂಪಾಂಬಿಕೆ –ವಿರೂಪಾಕ್ಷರನ್ನೇ ಕೇಂದ್ರವಾಗಿ ಹಂಪಿಯ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಗಳು ಸಾವಿರಾರು ವರ್ಷಗಳಿಂದ ನಡೆದುಕೊಂಡು ಬಂದಿವೆ. ಪಂಪಾ ವಿರೂಪಾಕ್ಷನಿಗೆ ಸಂಬಂಧಿಸಿದಂತೆ ಫಲಪೂಜೆ ಮತ್ತು ರಥೋತ್ಸವ ಎರಡು ಹಂತಗಳಲ್ಲಿ ಆಚರಣೆಗಳು ನಡೆಯುತ್ತವೆ. ಫಲ ಪೂಜೆಯು ಪ್ರತಿವರ್ಷ ಡಿಸೆಂಬರ್ ತಿಂಗಳಲ್ಲಿ ಮೂರು ಅಥವಾ ಕೊನೆಯ ವಾರದಂದು, ವಿರೂಪಾಕ್ಷನ ರಥೋತ್ಸವ ಹಂಪಿ ಹುಣ್ಣಿಮೆಯಂದು ನಡೆಯುತ್ತದೆ.

ಇಲ್ಲಿಯ ಅಧಿದೈವ ಮತ್ತು ಆರಾಧ್ಯ ದೈವ ವಿರೂಪಾಕ್ಷನೇ ಆಗಿದ್ದಾನೆ. ಪೌರಾಣಿಕವಾಗಿ ಧಾರ್ಮಿಕವಾಗಿ ಸಾವಿರಾರು ವರ್ಷಗಳಿಂದ ವಿರೂಪಾಕ್ಷನ ಆರಾಧನೆ ಈ ಶೈವ ನೆಲದಲ್ಲಿ ನಡೆದುಕೊಂಡು ಬಂದಿದೆ. ವಿಜಯನಗರ ಪೂರ್ವದಲ್ಲಿಯೂ ಹರಿಹರನು ವಿರೂಪಾಕ್ಷನನ್ನು ಪೂಜಿಸಿ ಆರಾಧಿಸಿ ಕಾವ್ಯಗಳನ್ನು ಬರೆದಿದ್ದಾನೆ. ವಿಜಯನಗರದ ಸಾಮ್ರಾಜ್ಯದ ಸಂಗಮ ವಂಶದ ಅರಸರು ವಿರುಪಾಕ್ಷನ ಹೆಸರಿನಲ್ಲಿ ತಮ್ಮ ಸಾಮ್ರಾಜ್ಯದ ಆಳ್ವಿಕೆ ನಡೆಸಿದ್ದಾರೆ ಹಂಪಿಯ ನೆಲದಲ್ಲಿ ಒಂದೊಮ್ಮೆ ಕಾವ್ಯವನ್ನೇ ಬರೆಯಲಿ ಸಾಮ್ರಾಜ್ಯವನ್ನೇ ಆಳಲಿ ಅದು ವಿರೂಪಾಕ್ಷನ ಹೆಸರಲ್ಲೇ ಇರುತಿತ್ತು. ಕವಿ ಮತ್ತು ರಾಜರು ಅವನ ಪ್ರತಿನಿಧಿಯಾಗಿ ಕಾವ್ಯವನ್ನು ಬರೆದರು ರಾಜರು ಪ್ರತಿನಿಧಿಯಾಗಿ ಆಡಳಿತ ನಡೆಸಿದ್ದಾರೆ.





### ಫಲಪೂಜೆ

ಪಂಪಾಪುರದ ಅರಸ ಶ್ರೀ ವಿರೂಪಾಕ್ಷ ಹಾಗೂ ಪಂಪಾಂಬಿಕೆಯರ ಮದುವೆಯ ನಿಶ್ಚಿತಾರ್ಥದ ಆಚರಣೆ ಫಲಪೂಜೆ ಆಗಿದೆ. ಈ ಫಲ ಪೂಜೆ ಆಚರಣೆಗೆ ಪೌರಾಣಿಕ ಕಥೆಗಳಿವೆ. ಬ್ರಹ್ಮನ ಮಾನಸ ಪುತ್ರಿಯಾದ ಪಂಪಾಂಬಿಕೆ ಶಿವನಲ್ಲಿ ಅನುರಕ್ತಳಾಗಿ ಅವನನ್ನು ವರಿಸಲು ನಿರ್ಧರಿಸುತ್ತಾಳೆ. ಆಗ ಹಂಪಿಯಲ್ಲಿ ತಪಸ್ಸನ್ನು ಮಾಡುತ್ತಾಳೆ. ಅವಳ ತಪಸ್ಸಿಗೆ ಮೆಚ್ಚಿದ ಶಿವ ಪ್ರತ್ಯಕ್ಷನಾಗಿ ಅವಳನ್ನು ವರಿಸಿದ. ಹೀಗಾಗಿ ಪಂಪಾಂಬಿಕೆಯಿಂದ ಪಂಪ ವಿರೂಪಾಕ್ಷನಾದ ಎಂಬ ಅಭಿಪ್ರಾಯ ವಿದೆ. ಮತ್ತೊಂದು ಕಥೆಯ ಪ್ರಕಾರ ದಕ್ಷನ ಯಜ್ಞ ಕುಂಡದಲ್ಲಿ ಬಿದ್ದು ಸತ್ತ ದಾಕ್ಷಾಯಿಣಿಯ ಪರ್ವತ ರಾಜನ ಮಗಳಾಗಿ ಹುಟ್ಟುತ್ತಾಳೆ. ಆಕೆ ಪ್ರಾಪ್ತವಯಸ್ಕಳಾದಾಗ ಶಿವ ಆಕೆಯನ್ನು ಕೇಳಲು ಹೋಗುತ್ತಾನೆ .ಪುರಾಣದ ಈ ಭಾಗವೇ ಫಲಪೂಜೆಯಲ್ಲಿ ಪುನರ್ ಸೃಷ್ಟಿ ಯಾಗಿದೆ. ಗಂಡನ ಕಡೆಯವರು ಹೆಣ್ಣು ಕೇಳಲು ಹೋಗುವಾಗ ಏನೇನು ಆಚರಣೆಗಳು ಮಾಡುತ್ತಾರೊ, ಅವುಗಳೆಲ್ಲವೂ ಫಲ ಪೂಜೆಯಲ್ಲಿ ಮಾಡುತ್ತಾರೆ. ಮೊದಲು ಶುಭ ದಿನವನ್ನು ನಿಗದಿಪಡಿಸಲಾಗುತ್ತದೆ. ಆ ದಿನದಂದು ಪಂಪಾಪತಿಯನ್ನು ಸ್ನಾನ ಮಾಡಿಸಿ ಅವನಿಗೆ ಹೊಸ ಬಟ್ಟೆಗಳನ್ನು ತೊಡಿಸಿ ದೇವಸ್ಥಾನದ ರಿಂದ ಮೆರವಣಿಗೆ ಯಲ್ಲಿ ಹಂಪಿ ಹೊಳೆಯ ದಂಡೆಯಲ್ಲಿರುವ ಕೋದಂಡ ರಾಮ ದೇವಸ್ಥಾನದ ಅಂಗಳಕ್ಕೆ ಕರೆದುಕೊಂಡು ಬರುತ್ತಾರೆ. ಈ ಸಂದರ್ಭದಲ್ಲಿ ಪಂಪಾಪತಿಯ ಪರವಾಗಿ ಐದು ಜನ ಪೂಜಾರಿಗಳು ಇರುತ್ತಾರೆ ಪಂಪಾಂಬಿಕೆ ಪರವಾಗಿ ಐದು ಜನ ಪೂಜಾರಿಗಳು ಇರುತ್ತಾರೆ. ದೇವಸ್ಥಾನದ ಅಂಗಳದಲ್ಲಿ ಎರಡು ಕಡೆಯವರು ಮುಖಾ ಮುಖಿಯಾಗಿ ಕುಳಿತು ಗಂಡಿನ ಕಡೆಯವರು ಹೆಣ್ಣಿನ ಕಡೆಯವ ರನ್ನು ಈ ರೀತಿ ಕೇಳುತ್ತಾರೆ, ನಮ್ಮ ಪಂಪಾವಿರೂಪಾಕ್ಷ ಮುಕ್ಕಣ್ಣನಿಗೆ ನಿಮ್ಮ ಮಗಳನ್ನು ಕೊಟ್ಟು ಮದುವೆ ಮಾಡಿ ಅಂತ ಕೇಳುತ್ತಾ ಇದ್ದೇವೆ , ನಮ್ಮ ವಿರೂಪಾಕ್ಷ ನಿಮ್ಮ ಮಗಳನ್ನು ಒಪ್ಪಿಕೊಂಡಿದ್ದಾನೆ ಅದಕ್ಕೆ ನಿಮ್ಮ ಮಗಳನ್ನು ಕೊಟ್ಟು ಮದುವೆ ಮಾಡಿರಿ ಎಂದು ಕೇಳುತ್ತಾರೆ. ಆಗ ಹೆಣ್ಣಿನ ಕಡೆಯವರು ಒಪ್ಪಿಗೆ ನೀಡುತ್ತಾರೆ. ಇದನ್ನು ಅಲ್ಲಿ ಸೇರಿದ ಸಾವಿರಾರು ಜನರಿಗೆ ಹೇಳುತ್ತಾರೆ. ಹೀಗೆ ಪಂಪಾ ವಿರೂಪಾಕ್ಷರ ನಿಶ್ಚಿತಾರ್ಥವಾಗುತ್ತದೆ. ಆಗ ಜನರು ದೇವರ ಮುಯ್ಯ ಕೊಡುತ್ತಾರೆ ನಂತರ ಎಲ್ಲರೂ ವಿರೂಪಾಕ್ಷನೊಂದಿಗೆ ದೇವಸ್ಥಾನಕ್ಕೆ ಮರಳಿ ಬರುತ್ತಾರೆ. ಇದು ಫಲಪೂಜಾ ಸಂದರ್ಭದಲ್ಲಿ ನಡೆದುಕೊಂಡು ಬಂದ ಪರಂಪರೆಯಾಗಿದೆ. ಹೀಗೆ ನಿಶ್ಚಿತಾರ್ಥವಾದ ಪಂಪಾ ವಿರೂಪಾಕ್ಷನ ಮದುವೆಯು ರಥೋತ್ಸವದ ಸಂದರ್ಭದಲ್ಲಿ ನಡೆಯುತ್ತದೆ. ಈ ಫಲಪೂಜೆಗೆ ಸಾವಿರಾರು ಜನರು ಇಡೀ ರಾತ್ರಿಯಲ್ಲಿ ಪಾಲ್ಗೊಂಡು ತಮ್ಮ ಭಕ್ತಿಯನ್ನು ತೋರಿಸುತ್ತಾರೆ.

### ಜೋಡು ರಥೋತ್ಸವ

ಫಲ ಪೂಜೆಯ ಸಂದರ್ಭದಲ್ಲಿ ಪಂಪಾಂಬಿಕೆ ಹಾಗೂ ವಿರೂಪಾಕ್ಷರ ನಿಶ್ಚಿತಾರ್ಥ ಕಾರ್ಯ ಆಗಿರುತ್ತದೆ ಇದರ ಮುಂದುವರಿದ ಭಾಗವಾಗಿ ರಥೋತ್ಸವ ಸಂದರ್ಭದಲ್ಲಿ ಇವರ ಮದುವೆ ನಡೆಯುತ್ತದೆ. ಶಿವ ಪಾರ್ವತಿಯರ ಮದುವೆಯ ಸಂದರ್ಭವೇ ರಥೋತ್ಸವ. ಈ ರಥೋತ್ಸವವು ಸಾವಿರಾರು ವರ್ಷಗಳಿಂದ ಅತ್ಯಂತ ಭಕ್ತಿ ಶ್ರದ್ಧೆಯಿಂದ ಈ ಶೈವ ಕ್ಷೇತ್ರದಲ್ಲಿ ನಡೆದುಕೊಂಡು ಬಂದಿದೆ. ಅಷ್ಟೇ ಅಲ್ಲ ವಿಜಯನಗರದ ಸಾಮ್ರಾಜ್ಯದಲ್ಲಿ ಅತ್ಯಂತ ವೈಭವಪೇತಾವಾಗಿ ಈ ರಥೋತ್ಸವ ನಡೆದಿದೆ. ಇದಕ್ಕೆ ವಿದೇಶಿ ಪ್ರವಾಸಿಗರ ಬರಹಗಳು ಒಂದು ಕಡೆ ಇದ್ದರೆ. ಬೆಳಗ್ಗೆಯಿಂದ ಸಂಜೆಯವರೆಗೆ ರಥೋತ್ಸವವನ್ನು ಕಂಡ ಅಹೋಬಲ ಎನ್ನುವ ಕವಿ ತನ್ನ ವಿರೂಪಾಕ್ಷ ವಸಂತೋತ್ಸವ ಚಂಪು ಕೃತಿಯಲ್ಲಿ ಸವಿವರವಾಗಿ ದಾಖಲಿಸಿದ್ದಾನೆ. ಹಾಗಾಗಿ ಹಂಪಿಯ ರಥೋತ್ಸವದ ಬಗ್ಗೆ ನಮಗೆ ಅಧಿಕೃತವಾದ ಮಾಹಿತಿ ಲಭ್ಯವಿದೆ. ಅಲ್ಲಿಂದ ಆಗ ನಡೆಯುತ್ತಿದ್ದ ರಥೋತ್ಸವದ ಪರಂಪರೆ ಯಂತೆ ಹೆಚ್ಚು ಕಡಿಮೆ ಇವತ್ತಿನ ರಥೋತ್ಸವದ ಆಚರಣೆಗಳು ಚಾಚು ತಪ್ಪದೇ ನಡೆದುಕೊಂಡು ಬಂದಿವೆ.

ಅಹೋಬಲನ ಪ್ರಕಾರ ಒಂದು ಪಾರ್ವತಿದೇವಿಯ ರಥ ಇನ್ನೊಂದು ಶಿವನ ರಥ ಹೀಗೆ ಜೋಡಿ ರಥಗಳು ಎಳೆದ ಬಗ್ಗೆ ಅವನು ದಾಖಲಿಸಿದ್ದಾನೆ. ಈಗಲೂ ಜೋಡಿ ರಥಗಳನ್ನು ಎಳೆಯುತ್ತಾರೆ. ಆದರೆ ಒಂದನ್ನು ಚಂದ್ರಮೌಳಿ ರಥವೆಂದು ಮತ್ತೊಂದು ಪಂಪ ವಿರೂಪಾಕ್ಷ ರಥೋತ್ಸವ ಎಂದು ಕರೆಯುತ್ತಿದ್ದಾರೆ. ಸಿರಿವಂತನು ಶಿವಭಕ್ತರಲ್ಲಿ ಅಗ್ರಗಣ್ಯನು ಆದ ಪಂಪಾರ್ಯ ಎಂಬ ಒಬ್ಬ ವ್ಯಾಪಾರಿ ಇದ್ದನು. ಆತ ತಾನು ಸಂಪಾದಿಸಿದ ಐಶ್ವರ್ಯದ ಸಾರ್ಥಕೋಸ್ಕರವಾಗಿ ತನ್ನ ಹೆಸರಿನಿಂದ ರಥ ನಿರ್ಮಿಸಿ ಅತ್ಯುಚ್ಚವಾದ ರಥ ಒಂದನ್ನು ಸಮರ್ಪಣೆ ಮಾಡಿದ್ದನು. ಅದರಲ್ಲಿ ಮೂರ್ತಿಯನ್ನು ಏರಿಸಿದರು ಆಮೇಲೆ ವ್ಯಾಪಾರಿಗಳೇ ಮೊದಲಾದ ಜನಸ್ತೋಮವು ಚೆನ್ನಾಗಿ ಎಳಿಯಿತು, ಆದರೂ ಸಹ ಶೈವಾಗಮ ವಿಧಿ ವಿಧಾನಗಳಿಂದ ಪವಿತ್ರರಾದ ವಿಪ್ರರು ಎಳೆಯುತ್ತಿದ್ದ ಶಿವರಥವು ಮುಂದೆ ಹೋದ ಬಳಿಕವೇ ವ್ಯಾಪಾರಿಗಳ ರಥವು ಹೊರಟಿತು. ಪಾರ್ವತಿ ರಥವನ್ನು ಮುಂದಿಟ್ಟುಕೊಂಡು ಪಂಪಾಪತಿಯು ತನ್ನ ರಥವನ್ನು ನಡೆಸಿದನು ಎಂಬುದಾಗಿ ಜನರು ಭಾವಿಸಿದರು. ರಥದ ಮುಕ್ತಾಯದ ನಂತರ ನವೋ ಪಾರ್ವತಿ ಪತಯೇ ಹರ ಹರ ಮಹಾದೇವ ಎಂಬುದಾಗಿ ಗಟ್ಟಿಯಾಗಿ ಹೇಳುತ್ತಾ ಪ್ರದಕ್ಷಿಣವಾದ ನಡೆಯಿಂದ ಮಹಾದೇವನ ರಥದ ಹಿಂಭಾಗಕ್ಕೆ ಬಂದರು. ಕೆಲವರು ಆಗಲೇ ಭವ್ಯ ರಥಕ್ಕೆ ನಮಸ್ಕರಿಸಿ ಸ್ವರ್ಗಕ್ಕೆ ತೆರಳಲು ಯತ್ನ ಮಾಡಿದರು ಎಂದು ಅಹೋಬಲ ರಥದ ಉತ್ಸವವನ್ನು ಚಿತ್ರಿಸಿದ್ದಾನೆ

ರಥೋತ್ಸವದ ದಿನ ಪಂಪ ನಗರವು ಹೇಗೆ ಶೋಭಿಸುತ್ತಿತ್ತು ಎನ್ನುವುದನ್ನು ಅವನು ಹೀಗೆ ವಿವರಿಸುತ್ತಾನೆ. ಶ್ರೀ ವಿರೂಪಾಕ್ಷ ದೇವರ ರಥೋತ್ಸವವನ್ನು ನೋಡಬೇಕೆಂದು ಕೌತುಕದಿಂದಾಗಿ ಆಕಾಶತಲದಿಂದ ಬೂತಲದವರಿಗು ಇಳಿದು ಬಂದಿದ್ದ ದೇವತೆಗಳು ರಾಕ್ಷಸರು ಸಿದ್ದರು ಗಂಧರ್ವರು ವಿದ್ಯಾಧರರು ನಾಗರು ಎಂದೆಲ್ಲ ಬುದ್ಧಿಯನ್ನುಂಟು ಮಾಡುವ ಶ್ರೇಷ್ಠ ಪರಿವಾರದಿಂದ ಕೂಡಿದ ದ್ವಿಜರಾಜಶೇಖರನಿಂದ ಸೇವಿತವಾದ ವಿಚಿತ್ರವಾದ ಶಾಲೆಗಳಿಂದ ಶೋಭಿಸುತ್ತಿತ್ತು. ಅವರವರ ವಿಮಾನಗಳ ಸಾಲುಗಳಿಂದ ಅಲಂಕೃತವಾಗಿತ್ತು ಕ್ಷೀರಸಾಗರ ಮಂಥನವಾಗುತ್ತಿರಲು ಉಂಟಾದ ನೊರೆಯ ರಾಶಿಯಂತೆ ಕ್ಷೇತ್ರ ಕಾಂತಿಯುಳ್ಳ ವಾಯುನಿಂದ ಡೋಲಾಯಿತವಾದ ಶ್ವೇತ ದ್ವಜಗಳಿಂದ ಕೂಡಿದ ಪ್ರಸಾದಗಳಿಂದಾಗಿ ಮೇಲೆ ಬೀಳುತ್ತಿದ್ದ ಆಕಾಶ ಗಂಗೆಯಿಂದ ಶೋಭಿಸುವ ನಿಮಗಿರಿಯ ಪುಂಗ ಶೃಂಗಗಳಿಂದ ಹೇಗೋ ಹಾಗೆ ವಿರಾಧಿಸುತ್ತಿತ್ತು ಸುತ್ತಲೂ ಶೈವ ಜನರು ಎತ್ತಿ ಹಿಡಿದ ಉನ್ನತ ವಾಲಂಬವನ್ನು ಅವಲಂಬಿಸಿದ ವ್ಯಾಸಮುನಿಯ ಹಸ್ತ ಹಾಗೂ ಶಿವನ ವೃಷಭ ಗಳಿಂದ ಶಿವ ಸರ್ವ ಶ್ರೇಷ್ಠ ವನ್ನು ಪ್ರಕಟಗೊಳಿಸುತ್ತಿತ್ತು ಎಂದು ರಥೋತ್ಸವದ ಹಂಪಿಯ ಚಿತ್ರಣವನ್ನು ನಮ್ಮ ಕಣ್ಮುಂದೆ ಕಟ್ಟಿಕೊಡುತ್ತದೆ. ರಥೋತ್ಸವವನ್ನು ನೋಡಲು ಜನರು ಹೇಮಕೋಟ ಪರ್ವತ, ಮಾತಂಗ ಪರ್ವತ, ಹೆಬ್ಬಂಡೆಗಳ ಮೇಲೆ ಕುಳಿತು ನಿಂತು ವಿರೂಪಾಕ್ಷ ರಥೋತ್ಸವವನ್ನು ವೀಕ್ಷಿಸಿ ಸಂಜೆ ಹೊತ್ತಿಗೆ ಎಲ್ಲರೂ ತಮ್ಮ ಮನೆಗಳಿಗೆ ಹೊರಟಿದ್ದನ್ನು ವಿವರಿಸುತ್ತಾನೆ. ಇಷ್ಟೇ ಅಲ್ಲ ಸೂರ್ಯನು ಸಹ ಸಂಜೆ ಹೊತ್ತಿಗೆ ಕೆಂಪಾಗಿ ರಥೋತ್ಸವವನ್ನು ಕಂಡು ತನ್ನವರಿಗೆ ತಿಳಿಸಲು ಭೂಮಿಯೊಳಗೆ ಹೋದ ಎಂದು ಅಹೋಬಲ ಕವಿ ಚಿತ್ರಿಸಿದ್ದಾನೆ. 14ನೇ ಶತಮಾನದಲ್ಲಿ ಆತ ಕಂಡ ರಥೋತ್ಸವದ ದೃಶ್ಯವನ್ನು ಈ ದಿನದ ರಥೋತ್ಸವದ ಸಂಜೆಯ ವಾತಾವರಣವು ಸಹ ಹಾಗೆ ಕಣ್ಣಿಗೆ ಕಾಣಿಸುತ್ತದೆ. ಚಾರಿತ್ರಿಕವಾಗಿಯು ಆರು ನೂರು ವರ್ಷಗಳಿಂದ ಪಂಪ ವಿರೂಪಾಕ್ಷೇಶ್ವರ ರಥೋತ್ಸವ ನಡೆದುಕೊಂಡು ಬಂದಿರುವುದನ್ನು ನಾವು ನೋಡುತ್ತಿದ್ದೇವೆ.

ಚಾರಿತ್ರಿಕವಾದ ಈ ಪಂಪಾರಥೋತ್ಸವವನ್ನು ರಾಜ್ಯದ ಆಗ ಹೊರ ರಾಜ್ಯಗಳ ಭಕ್ತರು ಸಹ ಬಂದು ಪಾಲ್ಗೊಳ್ಳುತ್ತಾರೆ. ಮಂಟಪ, ಬಂಡೆಗಳ ನೆರಳಲ್ಲಿ ಜನ ತಂಗುತ್ತಾರೆ. ರಥೋತ್ಸವದ ದಿನ ಬೆಳಗ್ಗೆ ಈ ಹಿಂದೆ ವಿರೂಪಾಕ್ಷ ರಥ ಬೀದಿಯಲ್ಲಿದ್ದ ಮಂಟಪಗಳ ಮಠಗಳಲ್ಲಿ ಅನ್ನದಾಸೋಹ ನಡೆಸುತ್ತಿದ್ದರು. ಸ್ಥಳೀಯರಷ್ಟೇ ಅಲ್ಲ ಆಂಧ್ರದಿಂದ ಬರುವ ವಿರೂಪಾಕ್ಷನ ಭಕ್ತರು ಸಹ ಅನ್ನದಾಸೋಹವನ್ನು ಏರ್ಪಡಿಸುತ್ತಾರೆ. ಭಕ್ತಿ ಸಡಗರದಿಂದ ಸಾವಿರಾರು ವರ್ಷಗಳಿಂದ ಹಂಪಿಯ ಪಂಪ ವಿರೂಪಾಕ್ಷೇಶ್ವರ ರಥೋತ್ಸವ ಭಕ್ತಿ, ಸಡಗರ ದಿಂದ ನಡೆದುಕೊಂಡು ಬಂದಿದೆ. ವಿಜಯನಗರ ಅರಸರ ಕಾಲದಿಂದ ಕಮಲಾಪುರ ಹೊಸಪೇಟೆಯ ವಾಲ್ಮೀಕಿ ನಾಯಕ ಜನಾಂಗದವರು ರಥವನ್ನು ಪ್ರಮುಖರಾಗಿ ಮುನ್ನೆಡೆಸಿಕೊಂಡು ಬಂದಿದ್ದಾರೆ.



# ಬಳಲುವಿಕೆ–ಬಾಗುವಿಕೆ ಬದುಕಿನ ಭಾಗ

■ ಲಕುಮಿಸುತ ಸಾರವಾಡ

ಬಳಲುವುದು ಮತ್ತು ಬಾಗುವುದು ಕೇವಲ ನಮಗೆ ಬಂದೊದಗಿದ ಸಂಕಷ್ಟಗಳು, ನಷ್ಟಗಳು, ಅಥವಾ ಸೋಲು ಎಂದು ಪರಿಭಾವಿಸಿ ಹತಾಶರಾಗಬಾರದು.



ಬಳಲುವುದು ಎಂದರೆ ಅಂದುಕೊಂಡದ್ದು ಆಗದಿದ್ದಾಗ, ಉತ್ತಮ ಕೆಲಸ ಮಾಡಿದಾಗಲೂ ಕೊಂಕ ಮಾತುಗಳ ಪ್ರತಿಕ್ರಿಯೆ ಅಥವಾ ಕಟು ಟೀಕೆಗಳು, ಸುಖಾ ಸುಮ್ಮನೆ ಅಪವಾದ ಆರೋಪಗಳ ಸುರಿಮಳೆ ಇತ್ಯಾದಿ. ಈ ಸಂದರ್ಭಗಳಲ್ಲಿ ಮನಸ್ಸಿಗೆ ತುಂಬಾ ನೋವಾಗುವುದು ಸತ್ಯ. ಆಗ ಮನುಷ್ಯ ತಾಳ್ಮೆ ಕಳೆದುಕೊಂಡು ಸಿಟ್ಟಿನ ಭರದಲ್ಲಿ ವಾದಿಸಿ ಮನಸ್ಸಿಗೆ ತಾಪ ಮಾಡಿಕೊಳ್ಳುವುದೂ ಸಹಜ. ಅದರಿಂದ ಯಾವ ಮಾನಸೀಕ ನೆಮ್ಮದಿ ಸಿಗುವುದಿಲ್ಲ. ಬದಲಾಗಿ ಮನಸ್ಸು ಮತ್ತಷ್ಟು ವಿಚಲಿತವಾಗುವುದಂತೂ ನಿಜ. ಹಾಂ. ಆದರೆ "ನಾನೂ ಬಿಡಲಿಲ್ಲ ತಕ್ಕ ಪ್ರತಿಕ್ರಿಯೆ ಕೊಟ್ಟಿದ್ದೇನೆ ಎನ್ನುವ ತಾತ್ಕಾಲಿಕ ಸಮಾಧಾನ ಸಿಕ್ಕಂತೆ ಭಾಸವಾಗುತ್ತದೆ. ಆಂತರಿಕವಾಗಿ ಮನದಲ್ಲಿ ನೋವು ದ್ವೇಷ ಕುದಿಯುತ್ತಲೇ ಇರುತ್ತದೆ. ಅಂದಾಗ ನೆಮ್ಮದಿ ಸಿಗುವ ಬಗೆ ಹೇಗೆ?.

ಹೌದು. ಮಾನವ ಸಹಜ ಸ್ವಭಾವ ಬೇಗನೇ ಬದಲಾವಣೆಗೆ ಹೊಂದಿಕೊಳ್ಳುವುದಿಲ್ಲ. ಇಂತಹ ಮಾತುಗಳು ಹೇಳಲು, ಓದಲು, ಉಪದೇಶಿಸಲು ಚಂದ ಆದರೆ ಸ್ವಯಂ ಪಾಲಿಸಲು ಅಸಾಧ್ಯ ಎನ್ನುವವರೇ ಹೆಚ್ಚು. ಒಬ್ಬ ತಾನು ತನ್ನ ಸಿಟ್ಟು, ಮತ್ಸರ, ದ್ವೇಷ, ಸ್ವಾರ್ಥ, ಪ್ರತಿಷ್ಠೆ ಮತ್ತು ಅಹಂಕಾರದ ಭಾವನೆಗಳನ್ನು ಹೊಂದಿ ದುರುದ್ದೇಶದಿಂದ ಹೀಗೆ ವರ್ತಿಸಲು ಸಾಧ್ಯ. ಮತ್ತೊಬ್ಬ ಎದುರಿಗಿನ ವ್ಯಕ್ತಿಯೂ ಹಾಗೆಯೇ ಮಾಡಿದರೆ ಇಬ್ಬರಿಗೂ ಮನಃಶಾಂತಿ ಸಿಗದೇ ಇಬ್ಬರೂ ಬಳಲಬೇಕಾಗುತ್ತದೆ.



ಇಂತಹ ಬಳಲುವಿಕೆಯಿಂದ ಪಾರಾಗಲು ದಾರಿಯೇ ಇಲ್ಲವೆ? ಯಾಕಿಲ್ಲ ಇದೆ. ಸುಖಾಸುಮ್ಮನೆ ಅಪವಾದ, ಆರೋಪಕ್ಕೆ ಗುರಿಯಾದ ವ್ಯಕ್ತಿ ಒಂದು ಕ್ಷಣ ಮೌನಿಯಾಗಿ, ಆಲೋಚಿಸಿ ವಾದಕ್ಕಿಳಿಯಬಾರದು. ಗಟ್ಟಿ ಮನಸ್ಸಿನಿಂದ ತಾಳ್ಮೆ ವಹಿಸಬೇಕು. ಈ ಸಮಯ ಹೀಗೇ ಇರುವುದಿಲ್ಲ. ಖಂಡಿತಾ ಬದಲಾಗುತ್ತದೆ ಎಂದು ತಿಳಿದು ದೃಢ ಸಂಕಲ್ಪ ಮಾಡಿ ಬಾಗಬೇಕು. ಬಾಗುವುದು ಎಂದರೆ, ಇದು ಸೋಲು, ಸಂಕಷ್ಟ ಅಥವಾ ನಷ್ಟವೂ ಅಲ್ಲ. ಸ್ವಯಂ ಆತ್ಮ ಗೌರವವನ್ನು ಹೆಚ್ಚಿಸಿಕೊಂಡಂತೆ. ಕೆಲಸಕ್ಕೆ ಬಾರದ ವ್ಯರ್ಥ ಮಾತುಗಳಿಗೆ ಬೆಲೆ ಕೊಡದೇ ಮನಸ್ಸಿಗೆ ತಾಪ ಮಾಡಿಕೊಳ್ಳದೇ ದೈವತ್ವದ ಭಾವನೆಯಿಂದ ತಮ್ಮ ನಿತ್ಯ ಸತ್ಕರ್ಮದ ಚಿಂತನೆಯಲ್ಲಿ ತೊಡಗಬೇಕು. ಹೀಗೆ ಮಾಡುವುದರಿಂದ ತನ್ನಲ್ಲಿ ಹುದುಗಿದ ನೆಮ್ಮದಿ ಶಾಂತಿ ಹೊರಬರುತ್ತದೆ. ನಮ್ಮ ಕರ್ಮದ ಫಲಕ್ಕೆ ದೇವರು ಸಂತೋಷವನ್ನು ಖಂಡಿತಾ ದಯಪಾಲಿಸುತ್ತಾನೆ. ಒಮ್ಮೆ ಇಂತಹ ಒಂದು ಘಟನೆ ಅನುಭವಕ್ಕೆ ಬಂದರೆ, ಸ್ವತಃ ಅನುಭವಕ್ಕೆ ಬರುತ್ತದೆ. ಆಗ ಮುಂದೆ ಎಂತಹದೇ ಬಳಲಿಕೆಗಳು ಭಾದಿಸುವದಿಲ್ಲ. ಸಂಯಮದ ವರ್ತನೆ, ಸಾಂದರ್ಭಿಕ, ವಿವೇಚನೆಯಿಂದ ತೆಗೆದುಕೊಳ್ಳುವ ಸಂಕಲ್ಪ, ಸಂತೋಷವನ್ನು ತಂದು ಕೊಡುತ್ತದೆ. ಸೋಲಿನ ಹಿಂದೆ ಗೆಲವು, ದುಃಖದ ಹಿಂದೆ ಸುಖ, ಕತ್ತಲೆಯ ಹಿಂದೆ ಬೆಳಕು ಇದ್ದೇ ಇರುತ್ತದೆ. ಯಾವುದೇ ಪರಿಸ್ಥಿತಿ, ಸಂದರ್ಭ, ಸಮಯ, ಇದ್ದ ಹಾಗೆಯೇ ಇರುವುದಿಲ್ಲ. ಬದಲಾವಣೆ ಜಗದ ನಿಯಮ.

ಇಂದು ರಾಗದ್ವೇಷ ಹೊಂದಿದ ವ್ಯಕ್ತಿ, ನಾಳೆ ಪಶ್ಚಾತ್ತಾಪದಿಂದ ಬಾಗಲೂಬಹುದು. ಅಥವಾ ಉತ್ತಮ ವ್ಯಕ್ತಿ ಎನಿಸಿಕೊಂಡವ ಅಹಂಕಾರದಿಂದ ಬೀಗಿ ಬಳಲೂಬಹುದು. ಬಳಲುವುದು ಮತ್ತು ಬಾಗುವುದು ಬದುಕಿನ ಭಾಗವೇ ಸರಿ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**–: ಸಂಪಾದಕರು :–**

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**

ಇ–ಮೇಲ್:hampitimes@gmail.com

M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

**– ಜಾಹೀರಾತು ವ್ಯವಸ್ಥಾಪಕರು.**

# ಮನುಕುಲಕ್ಕೆ ಹೆಮ್ಮೆ ಅಕ್ಕಮಹಾದೇವಿ

ಇಂದಿನ ಶಿವಮೊಗ್ಗ ಜಿಲ್ಲೆಯ ಉಡುತಡಿ ಗ್ರಾಮದಲ್ಲಿನ ಶಿವಶರಣ ದಂಪತಿಗಳಾದ ಓಂಕಾರ ಶೆಟ್ಟಿ ಮತ್ತು ಲಿಂಗಮ್ಮ ದಂಪತಿಗಳ ಏಕೈಕ ಕುವರಿ ನಮ್ಮ ಮಹಾದೇವಿ. ಮಹಾದೇವಿಯನ್ನು ಗರ್ಭದಲ್ಲಿ ಹೊತ್ತಿರುವಾಗಲೇ ತಾಯಿ ಲಿಂಗಮ್ಮ ಪೂಜೆ ಪುನಸ್ಕಾರ ಜಪತಪಗಳಲ್ಲಿ ನಿರತಳಾಗಿರುತ್ತಿದ್ದಳು. ಯಾವುದೋ ಒಂದು ಚಿಜ್ಯೋತಿ ತನ್ನ ಗರ್ಭದಲ್ಲಿ ಬೆಳೆಯುತ್ತಿದೆ ಎಂಬಂತಹ ಹಲವಾರು ಘಟನೆಗಳು ನಡೆದು ಆಕೆ ಸದಾ ಶಿವ ಧ್ಯಾನ ನಿರತಳಾಗಿರುತ್ತಿದ್ದಳು. ಮುಂದೆ ನವಮಾಸಗಳ ನಂತರ ಹುಟ್ಟಿದ ಮಗುವಿಗೆ ಗುರುಗಳಾದ ಲಿಂಗದೇವರು, ಮಹಾದೇವಿ ಎಂದು ಹೆಸರಿಟ್ಟರು.

ಚಿಕ್ಕ ಮಗುವಿದ್ದಾಗಿನಿಂದಲೂ ಮಹಾದೇವಿಯು ಪೂಜೆ ಧ್ಯಾನಗಳಲ್ಲಿ ತೊಡಗಿಕೊಂಡಿರುತ್ತಿದ್ದಳು. ಸ್ವಭಾವತಃ ಧರ್ಮಭೀರು ಮತ್ತು ಜ್ಞಾನಪಿಪಾಸುವಾಗಿದ್ದ ತಂದೆ ಓಂಕಾರ ಶೆಟ್ಟಿಯು ಮಗಳು ವಿದ್ಯೆ ಕಲಿಯಲಿ ಎಂದು ಮಠದ ಗುರುಗಳಾದ ಗುರುಲಿಂಗ ದೇವರಲ್ಲಿ ಕರೆತಂದು ಆಕೆಯ ವಿದ್ಯಾಭ್ಯಾಸಕ್ಕೆ ಓಂಕಾರ ಹಾಡಿದನು. ಮಠದಲ್ಲಿಯೇ ನಡೆಯುತ್ತಿದ್ದ ಗುರು ಮನೆಯಲ್ಲಿ ಮಹಾದೇವಿ ಅಕ್ಷರಾಭ್ಯಾಸವಲ್ಲದೆ, ವ್ಯಾಕರಣ ಪುರಾಣ ಕಾವ್ಯ ಮುಂತಾದ ಹಲವಾರು ವಿದ್ಯೆಗಳನ್ನು ಕಲಿತು ನಿರೀಕ್ಷೆಗೆ ಮೀರಿದ ಪ್ರಗತಿಯನ್ನು ಸಾಧಿಸಿದಳು. ಆಕೆಯ ಗ್ರಹಣ ಶಕ್ತಿ ಮತ್ತು ಕ್ರಮಯುಕ್ತ ಅಭ್ಯಾಸದ ಆಸಕ್ತಿ ಆಕೆಯ ಕಲಿಯುವ ವೇಗವನ್ನು ಹೆಚ್ಚಿಸಿತ್ತು. ಲಿಂಗಮ್ಮನ ಆಚರಣೆಗಳು, ಓಂಕಾರ ಶೆಟ್ಟಿಯ ಸತ್ವಪೂರ್ಣ ಜೀವನ, ಗುರುಲಿಂಗ ದೇವರ ವಿರಕ್ತಿಯ ತೇಜ ಈ ಮೂರು ಸೇರಿ ಮಹಾದೇವಿಯ ಬದುಕಿನ ರೂಪರೇಷೆಯನ್ನು ತೋರುವ ದಾರಿ ದೀಪಗಳಾದವು.

ದಿನಗಳದಂತೆ ಸ್ವಾಭಿಮಾನ, ದಿಟ್ಟತನದ ಪ್ರತೀಕವಾಗಿದ್ದ ಮಹಾದೇವಿ ವಿನಯದ ಹೆಸರಿನಲ್ಲಿ ಮೂಢತನವ ಮಾಡಲು ಒಪ್ಪುತ್ತಿರಲಿಲ್ಲ. ಚಿಕ್ಕಂದಿನಲ್ಲಿ ಶ್ರೀಶೈಲದ ಚೆನ್ನಮಲ್ಲಿಕಾರ್ಜುನ ದೇವರನ್ನು ತನ್ನ ಪತಿ ಎಂದು ನಿಶ್ಚಯಿಸಿದ ಮಹಾದೇವಿ ಹರೆಯಕ್ಕೆ ಬಂದಾಗ ಇನ್ನಷ್ಟು ಪೂಜೆ ಜಪತಪಗಳನ್ನು ಮಾಡುತ್ತಾ ಚೆನ್ನ ಮಲ್ಲಿಕಾರ್ಜುನನನ್ನು ಒಲಿಸಿಕೊಳ್ಳುವ ಪ್ರಯತ್ನ ಮಾಡಿದಳು. ಆಗಾಗ ವಚನಗಳನ್ನು ರಚಿಸುತ್ತಿದ್ದ ಮಹಾದೇವಿವಚನದ ಮೂಲಕ ತನ್ನ ಮನದ ಭಾವನೆಗಳನ್ನು ಹೊರಹಾಕಿದಳು.

"ಅಕ್ಕ ಕೇಳವ್ವ ನಾನೊಂದ ಕನಸ ಕಂಡೆ, ಚಿಕ್ಕ ಚಿಕ್ಕ ಕೆಂಜೆಡೆಗಳ ಸುಲಿಪಲ್ಲ ಗೊರವನು ಬಂದೆನ್ನನೆರೆದ ನೋಡವ್ವ ಆತನನಪ್ಪಿಕೊಂಡು ತಳವೆಳಗಾದೆನು ಚೆನ್ನಮಲ್ಲಿಕಾರ್ಜುನನ ಕಂಡು ಕಣ್ಣು ಮುಚ್ಚಿ ತೆರೆದು ತಳವೆಳಗಾದೆನು"

ತನ್ನ ಸಮವಯಸ್ಕ ಸ್ನೇಹಿತರಂತೆ ಉಡುಗೆ ತೊಡುಗೆ ವಸ್ತ್ರಾಭರಣ ಆಟ ಪಾಠಗಳಲ್ಲಿ ಶೃಂಗಾರ ಸಾಧನಗಳಲ್ಲಿ ಖುಷಿ ಕಾಣದ ಮಹಾದೇವಿ ಪ್ರಾತಃಕಾಲದಲ್ಲಿ ಎದ್ದು ಇಡೀ ಮನೆಯನ್ನು ಸ್ವಚ್ಛಗೊಳಿಸಿ ಸ್ನಾನ ಮಾಡಿ ಶುಚಿರ್ಭೂತಳಾಗಿ ಶುದ್ಧ ವಸ್ತ್ರ ಧರಿಸಿ ದೇವರ ಪೂಜೆಯಲ್ಲಿ ನಿರತಳಾಗುತ್ತಿದ್ದಳು. ಅಂಗೈಯಲ್ಲಿ ಲಿಂಗವನ್ನು ಹಿಡಿದು ಗಂಟೆಗಳ ಕಾಲ ಧ್ಯಾನ ನಿರತಳಾಗುತ್ತಿದ್ದ ಮಹಾದೇವಿಯ ಮುಖದಲ್ಲಿ ಮೂಡುತ್ತಿದ್ದ ದಿವ್ಯ ಕಾಂತಿ, ತೇಜಸ್ಸನ್ನು ಕಂಡು ಆಕೆಯ ಧ್ಯಾನಭಂಗ ಮಾಡದಿರಲು ತಂದೆ ಓಂಕಾರ ಶೆಟ್ಟಿಯು ಪತ್ನಿ ಲಿಂಗಮ್ಮನಿಗೆ ತಾಕೀತು ಮಾಡುತ್ತಿದ್ದನು. ಧ್ಯಾನದಲ್ಲಿ ನಿರತಳಾಗುತ್ತಿದ್ದ ಮಹಾದೇವಿ ತನ್ನ ಪತಿಯಾದ ಚೆನ್ನಮ್ಮಲಿಕಾರ್ಜುನನ ಕಾಣುವಿಕೆಯ ವಿರಹದಿಂದ ಬಳಲಿ ಬೆಂಡಾಗುತ್ತಿದ್ದಳು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper


ಕೃಶಲಾಗುತ್ತಿದ್ದಳು ಮತ್ತೆ ಮತ್ತೆ ಆತನನ್ನು ನೋಡಬೇಕೆಂಬ ಹಂಬಲ ಕ್ಕೊಳಗಾಗುತ್ತಿದ್ದಳು. ಇಹ ಪರದ ಅರಿವಿರದೆ ದಿನಗಟ್ಟಲೆ ಧ್ಯಾನದಲ್ಲಿ ಮುಳುಗೇಳುತ್ತಿದ್ದ ಮಹಾ ದೇವಿಯನ್ನು ಕಂಡು ತಾಯಿ ಲಿಂಗಮ್ಮ ಕಳವಳಕ್ಕೊಳಗಾಗಿ ಗುರುಲಿಂಗ ದೇವರಲ್ಲಿ ಈ ಕುರಿತು ಪ್ರಶ್ನಿಸಿದಾಗ ಅವರು 'ಅವ್ವ... ನೀ ಹಡೆದದ್ದು ಇಹಕ್ಕೆ ಸಲ್ಲುವ ಮಗಳಲ್ಲ, ಆಕೆ ಬಸವಣ್ಣನವರ ಪ್ರೀತಿಯ ಮಗಳು..... ಅವರಿಗೇ ಸಲ್ಲುವಳು. ಮುಂದೊಮ್ಮೆ ಆಕೆ ಲೋಕಮಾತೆಯಾಗುವಳು ಆಕೆಯನ್ನು ತಡೆಯಬೇಡ' ಎಂದು ಹೇಳಿದರು.

ಒಂದೊಮ್ಮೆ ತಾಯಿಯ ಒತ್ತಾಸೆಯ ಮೇರೆಗೆ ಉತ್ಸವವನ್ನು ನೋಡಲು ಹೋದ ಮಹಾದೇವಿಯು ಮಹಾರಾಜ ಕೌಶಿಕನ ಕಣ್ಣಿಗೆ ಬಿದ್ದು, ಮಹಾದೇವಿಯ ಸೌಂದರ್ಯಕ್ಕೆ ಬೆರಗಾಗಿ ಕೌಶಿಕನು ಮದುವೆಯ ಪ್ರಸ್ತಾಪವನ್ನು ಕಳುಹಿಸಿದನು. ಪರಿಸ್ಥಿತಿಯ ಒತ್ತಡ ಮತ್ತು ಅನಿವಾರ್ಯತೆಯಿಂದಾಗಿ ಮಹಾದೇವಿಯು ಮೂರು ಷರತ್ತುಗಳನ್ನು ಹಾಕಿ ಕೌಶಿಕನನ್ನು ವಿವಾಹವಾಗಲು ಒಪ್ಪಿಕೊಂಡಳು. ಆಕೆಯು

1 ಆಕೆಯ ಒಪ್ಪಿಗೆ ಇಲ್ಲದೆ ದೈಹಿಕ ಸಂಬಂಧಕ್ಕೆಳಸದಿ ರುವುದು

2ಸದಾಶಿವ ಪೂಜೆಯನ್ನು ಮಾಡುವ ಸ್ವಾತಂತ್ರ್ಯ,

3 ಶಿವ ಭಕ್ತರ ಮತ್ತು ಜ್ಞಾನಿಗಳ ಜೊತೆ ಮಾತಾಡುವ ಸ್ವಾತಂತ್ರ್ಯ ವನ್ನು ಅರಮನೆಯಲ್ಲಿ ತನಗೆ ಕೊಡಬೇಕು ಎಂದು ಮೂರು ಶರತ್ತುಗಳನ್ನು ಹಾಕಿದಳು.



ಆಕೆಯ ಸಾತ್ವಿಕ ಚೆಲುವಿನ ಮೋಹದಿಂದ ಹುಚ್ಚನಾದ ದೊರೆ ಕೌಶಿಕನು ಶರತ್ತುಗಳಿಗೆ ಬದ್ಧವಾಗಿ ರಲು ಒಪ್ಪಿಕೊಂಡ. ಆದರೆ ವಿವಾಹದ ನಂತರದ ದಿನಗಳಲ್ಲಿ ಆ ಶರತ್ತುಗಳನ್ನು ನಿರ್ವಹಿಸ ಲಾಗದೆ ಹೋಗಿ ಆಕೆಯ ಸೀರೆಯ ಸೆರಗಿಗೆ ಕೈ ಹಾಕಿದಾಗ ಆತನಿಗೆ ಅಗ್ನಿಯ ಜ್ವಾಲೆ ಸೋಕಿದಂತಾಗಿ ದಿಗ್ಮೂಢ ನಾದನು ಕೌಶಿಕ ಮಹಾರಾಜ. ಶರತ್ತು ಮುರಿದು ಸೀರೆ ಸೆಳೆದ ಆತನನ್ನು ತೊರೆದು ನಿರ್ವಾಣ ಸ್ಥಿತಿಯಲ್ಲಿಯೇ ಮಹಾದೇವಿಯು ಬಸವಕಲ್ಯಾಣ ದೆಡೆಗೆ ನಡೆದಳು. ಒಬ್ಬ ಹರೆಯದ, ತುಂಬು ಯೌವ್ವನದ ಹೆಣ್ಣು ಮಗಳು ಅಂಗದ ಮೇಲೆ ವಸ್ತ್ರವಿಲ್ಲದೆ ತನ್ನ ಗಂಡನಾದ ಚನ್ನಮಲ್ಲಿಕಾರ್ಜು ನನನ್ನು ಹುಡುಕುವ ಮುನ್ನ ಆಧ್ಯಾತ್ಮ ಲೋಕದಲ್ಲಿ ಇನ್ನಷ್ಟು ಅರಿಯುವ, ಶರಣ ಸದ್ಭಕ್ತರೊಡನೆ ಬೆರೆಯುವ ಆಕಾಂಕ್ಷೆಯಿಂದ ಬಸವಕಲ್ಯಾಣದೆಡೆಗೆ ನಡೆದಳು.

ಹಸಿವಾದರೆ ಊರೊಳಗೆ ಭಿಕ್ಷಾನ್ನಗಳುಂಟು ತೃಷೆಯಾದರೆ ಕೆರೆ, ಬಾವಿ ಹಳ್ಳಗಳುಂಟು. ಶಯನಕ್ಕೆ ಹಾಳು ದೇಗುಲಗಳುಂಟು ಚೆನ್ನ ಮಲ್ಲಿಕಾರ್ಜುನಯ್ಯ ಆತ್ಮ ಸಂಗಾತಕ್ಕೆ ನೀನೇನಗುಂಟು ಎಂದು ಆಕೆ ಕೇಳಿದವರಿಗೆ ನಿರ್ಭೀತಳಾಗಿ ಉತ್ತರಿಸಿದಳು.

ಆಕೆಯು ಬರುವುದನ್ನು ತಮ್ಮ ದಿವ್ಯಚಕ್ಕುಗಳಿಂದ ಅರಿತ ಅನುಭವ ಮಂಟಪದ ಅಲ್ಲಮಪ್ರಭು, ಬಸವಣ್ಣ ರಾದಿಯಾಗಿ ಆಕೆಯನ್ನು ಕರೆತರಲು ಕಿನ್ನರಿ ಬೊಮ್ಮಯ್ಯನನ್ನು ಕಳುಹಿಸಿದರು. ಕಿನ್ನರಿ ಬೊಮ್ಮಯ್ಯನೊಡನೆ ಅನುಭವ ಮಂಟಪ ಪ್ರವೇಶಿಸಿದ ಮಹಾದೇವಿಯನ್ನು ಅತ್ಯಂತ ಕಠಿಣವಾಗಿ ಪ್ರಶ್ನಿಸಿದ ಅಲ್ಲಮ ಪ್ರಭುಗಳು ಮಹಾದೇವಿಯ ಘನ ಮಹಿಮೆಯನ್ನು ಆಕೆಯು ನೀಡಿದ ಉತ್ತರಗಳ ಮೂಲಕ ಇಡೀ ಜಗತ್ತಿಗೆ ಸಾರಿದರು. ಇಡೀ ಅನುಭವ ಮಂಟಪದ ಶರಣರೆಲ್ಲ ಕರತಾಡನ ಮಾಡುತ್ತಾ ಮಹಾದೇವಿಯನ್ನು ಅಕ್ಕಮಹಾದೇವಿ , ಮಹಾದೇವಿಯಕ್ಕ ಎಂದು ಕರೆದು ಗೌರವಿಸಿದರು.

ಮುಂದೆ ಕೆಲ ಕಾಲ ಬಸವಕಲ್ಯಾಣದಲ್ಲಿಯೇ ತಂಗಿದ ಅಕ್ಕನು ಮತ್ತೆ ಚೆನ್ನಮಲ್ಲಿಕಾರ್ಜುನನ ಹುಡುಕುತ್ತಾ ಶ್ರೀಶೈಲಕ್ಕೆ ಹೋಗುವ ಆಶಯವನ್ನು ವ್ಯಕ್ತಪಡಿಸಿ ಹೀಗೆ ಹೇಳಿದಳು.

ಅಯ್ಯಾ ನಿಮ್ಮ ಅನುಭಾವಿಗಳ ಸಂಗದಿಂದ ಎನ್ನ ತನು ಶುದ್ಧವಾಯಿತು, ಅಯ್ಯಾ ನಿಮ್ಮ ಅನುಭಾವಿಗಳ ಸಂಗದಿಂದ ಎನ್ನ ಮನ ಶುದ್ಧವಾಯಿತು, ಅಯ್ಯಾ ನಿಮ್ಮ ಅನುಭಾವಿಗಳ ಸಂಗದಿಂದ ಎನ್ನ ಪ್ರಾಣ ಶುದ್ಧವಾಯಿತು ಅಯ್ಯಾ ನಿಮ್ಮ ಅನುಭಾವಿಗಳು ಎನ್ನ ಒರೆದೊರೆದು ಆಗು ಮಾಡಿದ ಕಾರಣ ಚೆನ್ನಮಲ್ಲಿಕಾರ್ಜುನಯ್ಯ

ಎಂದು ಹೇಳಿ ಶರಣ ಸಂಕುಲವನ್ನು ಬೀಳ್ಕೊಂಡು ಶ್ರೀಶೈಲದ ಕಡೆಗೆ ಪ್ರಯಾಣ ಬೆಳೆಸಿದಳು. ಮಾರ್ಗ ಮಧ್ಯದಲ್ಲಿ ಆಕೆಯ ಬಳಿ ಬಂದು ಕ್ಷಮೆ ಕೋರಿದ ಮಹಾರಾಜ ಕೌಶಿಕನನ್ನು ಅಕ್ಕಮಹಾದೇವಿಯು ಕ್ಷಮಿಸಿದಳು. "ಅಲ್ಲದವರೊಡನಾಡಿ ಎಲ್ಲ ಸಂಗವ ತೊರೆದೆ ನಾನು, ನಾರಿ ಸಂಗವ ತೊರೆದೆ ನೀರ ಹೊಳೆಯ ತೊರೆದೆ ನಾನು ಚೆನ್ನಮಲ್ಲಿಕಾರ್ಜುನನ ಕೂಡುವ ಭರದಿಂದ ಎಲ್ಲ ಸಂಗವ ತೊರೆದೆ ನಾನು" ಎಂದು ತನ್ನ ಮನದ ಭಾವವನ್ನು ವಚನದ ಮೂಲಕ ಸಾರುತ್ತಾ ಅಕ್ಕ ಶ್ರೀಶೈಲದ ಮಲ್ಲಿಕಾರ್ಜುನ ದೇವರ ಬಳಿ ಸಾಗಿದಳು.

ಮಲ್ಲಯ್ಯನ ದರ್ಶನ ಮಾಡಿದ ನಂತರ ಸಂಭ್ರಮಿತಳಾದ ಅಕ್ಕಮಹಾದೇವಿ ಮುಂದೆ ಪಾತಾಳ ಗಂಗೆಯ ಇನ್ನೊಂದು ದಡದಲ್ಲಿದ್ದ ಕದಳಿವನದ ಗುಹೆಯಲ್ಲಿ ತನ್ನ ಜೀವಿತದ ಕೊನೆಯವರೆಗೂ ಉಳಿದಳು. ಅಲ್ಲಿಯೇ ಅಕ್ಕ ಗುಹೆಯಲ್ಲಿ ಜಪ ತಪ ಧ್ಯಾನಗಳಲ್ಲಿ ನಿರತಳಾಗಿ ಅಲ್ಲಿಯೇಕೇಕ ಲಿಂಗೈಕ್ಯಳಾದಳು

ಸುಮಾರು ಸಾವಿರ ವರ್ಷಗಳ ಹಿಂದೆಯೇ ಜೀವಿಸಿದ ಅಕ್ಕಮಹಾದೇವಿಯ ವಚನಗಳು ಇಂದಿಗೂ ಪ್ರಸ್ತುತ. ನೇರ ದಿಟ್ಟ ಮತ್ತು ನಿಷ್ಟುರವಾದ ಸತ್ಯಗಳನ್ನು ತನ್ನ ವಚನಗಳಲ್ಲಿ ಪ್ರತಿಪಾದಿಸಿದ ಅಕ್ಕ ಸ್ತ್ರೀ ಕುಲಕ್ಕೆ ಮಾತ್ರವಲ್ಲ ಇಡೀ ಮನುಕುಲಕ್ಕೆ ಮಾದರಿ ಮಹಿಳೆ. ಕನ್ನಡದ ಮೊತ್ತ ಮೊದಲ ಕವಯತ್ರಿ, ಸಂಸಾರದ ಸಾಗರದಲ್ಲಿ ಇದ್ದು ಕೂಡ ಸನ್ಯಾಸಿಯ ಜೀವನ ಸಾಗಿಸಿದ ವೀರ ವಿರಾಗಿಣಿ, ಅಕ್ಕನ ಬದುಕಿನ ಆದರ್ಶ ನಮಗೆಲ್ಲರಿಗೂ ಮಾದರಿಯಾಗಲಿ.ಎಲ್ಲರಿಗೂ ಅಕ್ಕಮಹಾದೇವಿ ಜಯಂತಿಯ ಶುಭಾಶಯಗಳು

# ವೈರಾಗ್ಯನಿಧಿ ಅಕ್ಕಮಹಾದೇವಿ

■ ಶೋಭಾ ಮಲ್ಲಿಕಾರ್ಜುನ್ ಚಿತ್ರದುರ್ಗ.

ಕನ್ನಡ ಸಾಹಿತ್ಯದ ಮೌಲಿಕ ಬರವಣಿಗೆಯಲ್ಲಿ ವಚನ ಸಾಹಿತ್ಯವೆಂಬದು ಮೇರು ಪರ್ವತ ವಿದ್ದಂತೆ, ಅದರಲ್ಲೂ 12ನೇ ಶತಮಾನದ ವಚನಕಾರರಲ್ಲಿ ಅತ್ಯಂತ ಕಿರಿಯ ವಚನಗಾರ್ತಿ ಯಾಗಿ ಕನ್ನಡದ ಪ್ರಪ್ರಥಮ ಕವಯತ್ರಿ ಯಾಗಿ, ಅಕ್ಕರೆಯ ಅಕ್ಕನಾಗಿ ಸುಮಾರು 434 ಕ್ಕೂ ಹೆಚ್ಚು ವಚನಗಳನ್ನು ರಚಿಸಿ "ಯೋಗಾಂಗ ತ್ರಿವಿಧಿ" ಕೃತಿಯ ಕರ್ತೃವಾಗಿ ಅಜರಾಮರಳಾಗಿರುವ ಮಹಾದೇವಿ ಅಕ್ಕ ಇಂದಿಗೂ ಮುಂದಿಗೂ ಎಂದೆಂದಿಗೂ ಪ್ರಸ್ತುತ.



ಕರ್ನಾಟಕದ ಮೀರಾಬಾಯಿ ಎನಿಸಿಕೊಂಡ ಅಕ್ಕಮಹಾದೇವಿಯ ಜೀವನಗಾಥೆಯೇ ಅಸಾಮಾನ್ಯ,ಅಸಾಧಾರಣ , ವೈಶಿಷ್ಟ್ಯ, ವಿಚಾರ ಪೂರ್ಣ ಕಥನ, ಐತಿಹ್ಯವೇ ಒಂದು ವಿಸ್ಮಯ.

ನಿರ್ಮಲ ಶೆಟ್ಟಿ /ಓಂಕಾರ ಶೆಟ್ಟಿ, ಸುಮತಿ/ ಲಿಂಗಮ್ಮ ಇವರ ಸುಪುತ್ರಿಯಾಗಿ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನ ಉಡುತಡಿ ಎಂಬ ಗ್ರಾಮದಲ್ಲಿ ಸಾಮಾನ್ಯ ವರ್ಗದಲ್ಲಿ ಜನಿಸಿದ ಮಹಾದೇವಿ ಅತ್ಯಂತ ಸಂಸ್ಕಾರವಂತಳಾಗಿ ಶಿವಭಕ್ತೆಯಾಗಿ ತನ್ನ ಬಾಲ್ಯವನ್ನು ಕಳೆಯುತ್ತಾಳೆ. ತನ್ನ ಯೌವನಾವಸ್ಥೆಯಲ್ಲಿ ಕೌಶಿಕ ಮಹಾರಾಜನ ಕಣ್ಣಿಗೆ ಬಿದ್ದ ಈಕೆ ದೊಡ್ಡವರ ಒತ್ತಾಯಕ್ಕೆ ಮಣಿದು, ಮನಸ್ಸಿಲ್ಲದ ಮನಸ್ಸಿನಿಂದ ಮೂರು ಷರತ್ತುಗಳ ಮುಂದಿಟ್ಟು ಕೌಶಿಕನನ್ನು ವಿವಾಹವಾಗುತ್ತಾಳೆ.ಸ್ವಾಭಿಮಾನದ ಪ್ರತೀಕವಾದ ಅಕ್ಕ ತನ್ನ ಶರತ್ತುಗಳಿಗೆ ಲೋಪವಾದಾಗ ಲೌಕಿಕ ಗಂಡನನ್ನು ತ್ಯಜಿಸಿ ಆಧ್ಯಾತ್ಮಿಕ ಗಂಡನಾದ ಚೆನ್ನಮಲ್ಲಿಕಾರ್ಜುನನ್ನು ಅರಸಿ , ಚಿಕ್ಕ ವಯಸ್ಸಿನಲ್ಲಿಯೇ ಸರ್ವ ಸುಖಗಳನ್ನೂ ಪರಿತ್ಯಜಿಸಿ, ಸಕಲ ಪರೀಕ್ಷೆಗಳನ್ನು ಎದುರಿಸಿ, ಕೇಶಾಂಬರಿಯಾಗಿ ಅರಮನೆಯಿಂದ ಗುರು ಮನೆಯನ್ನರಸಿ ಹೊರಡುತ್ತಾಳೆ.

ಹರನೇ ತನ್ನ ಗಂಡನಾಗಬೇಕೆಂದು ಅನಂತಕಾಲ ತಪಿಸಿದ್ದೆ ನೋಡ ಸೀಮೆಯಿಲ್ಲದ ನೀಸ್ಸಿಮ ಚೆಲುವನಿಗೆ ಮಾತ್ರ ಒಲಿದೆ ನೋಡ, ಚೆನ್ನಮಲ್ಲಿಕಾರ್ಜುನನೇ ತನ್ನ ಪತಿ ,ಶರಣಸತಿ ಲಿಂಗಪತಿ ಎಂಬ ಭಕ್ತಿ ಭಾವದಿಂದ ಚೆನ್ನಮಲ್ಲಿಕಾರ್ಜುನನನ್ನು ಅರಸಿ ಹೊರಟ ವೀರ ವಿರಾಗಿಣಿಗೆ ಹೆಜ್ಜೆ ಹೆಜ್ಜೆಗೂ ಸತ್ವ ಪರೀಕ್ಷೆಗಳು, ಅನುಭವ ಮಂಟಪದ ಮೊದಲ ಪ್ರವೇಶದಲ್ಲಿ ಅಲ್ಲಮ ಪ್ರಭುಗಳಿಂದ ಅಘಾದ ಪ್ರಶ್ನೆಗಳ ಸರಮಾಲೆಗೆ ಒಳಗಾದ ಈಕೆ ಅಗ್ನಿಯಲ್ಲಿ ಮಿಂದೆದ್ದ ಪರಿಶುದ್ಧ ಚಿನ್ನದಂತೆ, ಅನುಭವ ಮಂಟಪದ ಅಧ್ಯಕ್ಷರಾದ ಅಲ್ಲಮ ಪ್ರಭುಗಳಿಂದ ಸೈ ಅನ್ನಿಸಿಕೊಂಡು ,ವೈರಾಗ್ಯನಿಧಿ ಎಂಬ ಬಿರುದು ಪಡೆದಾಕೆ.

ತುಂಬು ಯೌವ್ವನದ ಸತಿ ನೀನು ಇತ್ತಲೇಕೆ ಬಂದೆಯವ್ವ ...ನಿನ್ನ ಪತಿ ಯಾರು ಹೇಳ ಎಂಬ ಅಲ್ಲಮರ ಮಾತಿಗೆ ಚೆನ್ನಮಲ್ಲಿಕಾರ್ಜುನನೇ ತನ್ನ ಪತಿ ಸಾವಕೆಡುವ ಗಂಡನನ್ನು ಬಯಸಿದವಳಲ್ಲ ಎಂದು ದಿಟ್ಟವಾಗಿ ಉತ್ತರಿಸುವ ಮಹಾದೇವಿಗೆ ನಿನ್ನ ದೇಹದ ಮೋಹ ಸೌಂದರ್ಯದ ಮೋಹ ನಿನಗೆ ಇನ್ನೂ ಉಳಿದಿದೆಯಲ್ಲವೇ ಅದಕ್ಕೆಂದೆ ಕೇಶಾಂಬರಿಯಾಗಿ ನಿನ್ನ ದೇಹವನ್ನು ಮುಚ್ಚಿಟ್ಟುಕೊಂಡಿರುವೆ ಎಂಬ ಮಾತಿಗೆ 'ಕಾಮ' ನನ್ನ ಮನಸ್ಸಿನಲ್ಲಿ ಎಂದೂ ಹುಟ್ಟಿಯೇಯಿಲ್ಲ,ಅಂಗದ ಭಂಗವ ಲಿಂಗ ಸುಖದಿಂದ ಗೆಲ್ಲಿದೆ,ಜೀವದ ಭಂಗವ ಶಿವಾನುಭವದಿಂದ ಗೆಲ್ಲಿದೆ,ಕರಗದ ಕತ್ತಲೆಯ ಬೆಳಗನ್ನುಟ್ಟುಗೆಲ್ಲಿದೆ,ಜೌವನದ ಹೊರಮಿಂಚಿನಲ್ಲಿ ನಿಮ್ಮ ಕಣ್ಣಿಗೆ ಕಾಣುವ ಕಾಮವ ಸುಟ್ಟುರಿಯುವ ಭಸ್ಮವ ನೋಡಯ್ಯ, ಕಾಮನ ಕೊಂದು ಮನಸ್ಸಿಜನಾಗುಳಿದರೆ, ಮನಸಿಜನ ತಲೆಬರಹವ ತೊಡೆದೆನು, ಎನ್ನ ಮನಸ್ಸಿಜನ ಜನನಕ್ಕೆ ಅವಕಾಶವನ್ನೇ ಕಲ್ಪಿಸಿ ಕೊಟ್ಟಿಲ್ಲ. ಫಲಪಕ್ವವಾದಲ್ಲದೆ ಹೊರಗಣ ಸಿಪ್ಪೆ ಒಪ್ಪಗೆಡದು ಕಾಮನ ಮುದ್ರೆಯ ಕಂಡು ನಿಮಗೆ ನೋವಾದೀತೆಂದು ಆ ಭಾವದಿಂದ ಕೇಶಾಂಬರಿಯಾಗಿರುವೆ ಕಾಡದಿರಣ್ಣ ಚೆನ್ನಮಲ್ಲಿಕಾರ್ಜುನನ ದೇವರ ದೇವನ ಒಳಗಾದವಳ ಎಂಬ ಅಕ್ಕನ ಧೀರನುಡಿಯನ್ನು ಕೇಳಿ ಅಲ್ಲಮಪ್ರಭುಗಳು ಪರಿಪರಿಯಾಗಿ ಪ್ರಶ್ನಿಸಿ, ಅರಿಷಡ್ವಗ9ಗಳನ್ನು ಗೆದ್ದ ಅಕ್ಕನನ್ನು ವಿಶ್ವ ಸ್ತ್ರೀ ಕುಲದ ಜ್ಯೋತಿ ನೀನು,ನಿನ್ನ ನಿಲುವನ್ನು ಜಗತ್ತಿಗೆ ಪರಿಚಯಿಸಲಷ್ಟೇ ನಾನಿಷ್ಟು ನಿಷ್ಟುರ ಕಠೋರನಾದೆ,ಜ್ಞಾನದ ಘನ ಮಹಿಮಳು ನೀನು, ಸದ್ವಿನಯ ಸದಾಚಾರ ವಿಶ್ವಾಸಗಳ ರತ್ನದಗಣಿ ನೀನು, ದಿಟ್ಟ ಹೆಜ್ಜೆಯ ಮೆಟ್ಟಿ ಬಂದಿರುವ ಮಹಾತಾಯಿ, ಮಹಾದೇವಿ ನಿನ್ನ ಸ್ತ್ರೀ ಪಾದಗಳಿಗೆ ನಮೋ ನಮೋ ಎಂದು ಕೈ ಮುಗಿಯುವರು.ಪ್ರಭುಗಳ ಮಾತನ್ನು ಪುರಸ್ಕರಿಸಿದ ಬಸವಣ್ಣನವರು ನಮಗೆಲ್ಲರಿಗೂ ಗುರುವಾಗ ಬಲ್ಲವಳು ತಾಯಿ, ಈ ಜಗಕೆ ಅಕ್ಕ.... ಮಹದೇವಿ ಅಕ್ಕ ಎಂದು ಕೈ ಮುಗಿಯವರು.

ಅಕ್ಕನ ಪ್ರತಿಯೊಂದು ವಚನಗಳು ಅರ್ಥಗರ್ಭಿತ, ಈಕೆ ತನ್ನ ಒಂದು ವಚನದಲ್ಲಿ, ಬೆಟ್ಟದಾ ಮೇಲೊಂದು ಮನೆಯ ಮಾಡಿ ಮೃಗಗಳಿಗೆ ಅಂಜಿ ದೊಡೆಯಂತಯ್ಯ, ಸಮುದ್ರದ ತಟದಲ್ಲೊಂದು ಮನೆಯ ಮಾಡಿ ನೊರೆತೆರೆಗಳಿಗಂಜಿದೊಡೆ ಎಂತಯ್ಯ

ಸಂತೆಯೊಳಗೊಂದು ಮನೆಯ ಮಾಡಿ ಶಬ್ದಕ್ಕೆ ನಾಚಿದೊಡೆಯಂತಯ್ಯ

ಚನ್ನಮ್ಮಲಿಕಾರ್ಜುನ ದೇವಾ ಕೇಳಯ್ಯಾ ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿ ನಿಂದನೆಗಳು ಬಂದರೆ ಮನದಲಿ ಕೋಪವ ತಾಳದೆ ಸಮಾಧಾನಿ ಯಾಗಿರಬೇಕು ಎಂಬ ತತ್ವವನ್ನು ಅರುಹುತ್ತ ಜಗತ್ತಿನಲ್ಲಿ ಮನುಜರು ಹೇಗೆ ಬದುಕಬೇಕೆಂಬ ಸಾಮಾಜಿಕ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

# ಹಂಪಿ ಟೈಮ್ಸ್

HAMPI TIMES
KANNADA DAILY
ಕನ್ನಡ ದಿನಪತ್ರಿಕೆ

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026



Good Opportunity for Branding
1,25,000+
Digital E-PAPER READERS



No.1 HAMPI TIMES LEADING PRINT & DIGITAL District News Paper
Call Us for Advertisements: 9448633038




## ದೇವಾಲಯ ದರ್ಶನ




ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

-: ದರ್ಶನ ಸಮಯ :-
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ

## ಆನಂದ ಬಾಣ




## ಮೈಕ್ರೋ ನ್ಯೂಸ್

### ಸರ್ವೋತ್ತಮ ಸೇವಾ ಪ್ರಶಸ್ತಿ: ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**
ರಾಜ್ಯ ಸರ್ಕಾರದ ಅಧಿಕಾರಿಗಳು ಮತ್ತು ನೌಕರರಿಗೆ 2024-25ನೇ ಸಾಲಿನಲ್ಲಿ ರಾಜ್ಯ ಹಾಗೂ ಜಿಲ್ಲಾ ಮಟ್ಟದ "ಸರ್ವೋತ್ತಮ ಸೇವಾ ಪ್ರಶಸ್ತಿ" ಪಡೆಯಲು ತಮ್ಮ ನಾಮ ನಿರ್ದೇಶನ ಸಲ್ಲಿಸಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. "ಸರ್ವೋತ್ತಮ ಸೇವಾ ಪ್ರಶಸ್ತಿ"ಯ ಎರಡು ಹಂತದ ಪ್ರಶಸ್ತಿಗಳಿಗೂ ಅರ್ಜಿ ಸಲ್ಲಿಸಬಯಸುವವರು, ಪ್ರತಿ ಹಂತಕ್ಕೂ ಪ್ರತ್ಯೇಕವಾಗಿ ತಮ್ಮ ನಾಮ ನಿರ್ದೇಶನವನ್ನು ಸಲ್ಲಿಸಬೇಕು.
ನಾಮ ನಿರ್ದೇಶನವನ್ನು ಸಲ್ಲಿಸಬಯಸುವವರು ಜಾಲತಾಣ https://dparar.karnataka.gov.in/ ಅಥವಾ https://sarvothamaawards.karnataka.gov.in/ ನಲ್ಲಿ ಏ.28 ರೊಳಗಾಗಿ ಅರ್ಜಿ ಸಲ್ಲಿಸಬೇಕು. ಆದೇಶದ ಪ್ರತಿಗಳನ್ನು ಜಾಲತಾಣ https://dparar.karnataka.gov.in/ ರ ಸರ್ಕಾರದ ಆದೇಶಗಳು, ತರಬೇತಿ ಹಾಗೂ ಇತರೆ ವಿವರಗಳನ್ನು ಇಲ್ಲಿ ಅವಲೋಕಿಸ ಬಹುದಾಗಿದೆ.
**ಪ್ರಶಸ್ತಿ ವಿವರ:** ಜಿಲ್ಲಾ ಮಟ್ಟದ (31 ಜಿಲ್ಲೆ*10 ಪ್ರಶಸ್ತಿ) ಸೇರಿದಂತೆ 310 ಪ್ರಶಸ್ತಿಗಳು, ರಾಜ್ಯ ಮಟ್ಟದ 30 ಪ್ರಶಸ್ತಿಗಳನ್ನು ವಿತರಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ 080-22230060ಗೆ ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾಡಳಿತ ಪ್ರಕಟಣೆ ತಿಳಿಸಿದೆ.

## ಕವಿ ಮನಸು

### ಇಂತೆಲ್ಲಾ ಕಂಡೆನಯ್ಯ

ಉಪಕಾರ ಪಡೆದು
ಅಪಪ್ರಚಾರ ಮಾಡುವವರ
ಕಂಡೆನಯ್ಯ

ಸತ್ಯವಂತರನು
ದೂಶಿಸಿ ಹಿಂಸಿಸಿದವರ
ಕಂಡೆನಯ್ಯ

ಹೆತ್ತವರ ಕಡೆಗಣಿಸಿ
ವೈಭವದಿ ಮೆರೆದವರ
ಕಂಡೆನಯ್ಯ

ಮನದಲ್ಲಿ ವಿಷವಿದ್ದು
ನಕ್ಕಂತೆ ಜೊತೆಯಿದ್ದವರ
ಕಂಡೆನಯ್ಯ

ನೊಂದವರ ಎದುರು
ಕೇಕೆ ಹಾಕಿ ನಗುವವರ
ಕಂಡೆನಯ್ಯ

ಹೆಣ್ಣಿನ ಅಸಾಹಾಯಕತೆ
ಬಳಸಿಕೊಂಡ ಮೂರ್ಖರ
ಕಂಡೆನಯ್ಯ

ಪ್ರಕೃತಿಯನು ಸ್ವಾರ್ಥಕ್ಕೆ
ಹೊಲಸು ಮಾಡುವ ನೀಚರ
ಕಂಡೆನಯ್ಯ

ಅರಿವಿಗೆ ಬಾರದಂತೆ
ವರ್ತಿಸುವ ಜಾಣರ
ಕಂಡೆನಯ್ಯ

ತಿದ್ದಿಕೊಳ್ಳದೇಯಿರುವ
ಜನಗಳ ಮದ್ಯೆ ಎಮ್ಮನು
ಕಾಪಾಡಯ್ಯ ಗುರುಬಸವ

-- GRB

# ಒಳಮೀಸಲಾತಿ ಜಾರಿಗೆ ಒತ್ತಾಯ

## ವಿಜಯನಗರ ಜಿಲ್ಲಾ ಛಲವಾದಿ ಮಹಾಸಭಾ ಅಧ್ಯಕ್ಷ ಸೋಮಶೇಖರ ಬಣ್ಣದಮನೆ ಆಗ್ರಹ




**ಹಂಪಿ ಟೈಮ್ಸ್ ಹೊಸಪೇಟೆ**
ತುಳಿತಕ್ಕೊಳಗಾದ ಸಮುದಾಯಗಳ ಏಳಿಗೆಗಾಗಿ ಒಳ ಮೀಸಲಾತಿಯನ್ನು ಸರ್ಕಾರ ವಿಳಂಬ ಮಾಡದೇ ತ್ವರಿತಗತಿಯಲ್ಲಿ ಪರಿಶಿಷ್ಟರ ಜಾತಿಗಣತಿ ಮಾಡಿ, ಯಾರಿಗೂ ಯಾವ ಸಮುದಾಯಕ್ಕೂ ಅನ್ಯಾಯವಾಗದೇ, ಜನಸಂಖ್ಯೆಗನುಗುಣವಾಗಿ ಮೀಡಲಾತಿ ನೀಡಲೇಬೇಕು ಎಂದು ವಿಜಯನಗರ ಜಿಲ್ಲಾ ಛಲವಾದಿ ಮಹಾಸಭಾ ಅಧ್ಯಕ್ಷ ಸೋಮಶೇಖರ ಬಣ್ಣದಮನೆ ಆಗ್ರಹಿಸಿದರು.
ನಗರದ ಅಮರಾವತಿ ಪ್ರವಾಸಿ ಮಂದಿರದಲ್ಲಿ ಶುಕ್ರವಾರ ಸಭೆ ನಡೆಸಿ ನಂತರ ಜಿಲ್ಲಾಧಿಕಾರಿ ಕಾರ್ಯಾಲಯಕ್ಕೆ ಮನವಿ ಸಲ್ಲಿಸಿ ಮಾತನಾಡಿದರು. ಜಸ್ಟೀಸ್ ನಾಗಮೋಹನ್ ದಾಸ್ ಅವರ ಅಯೋಗವು ಮನೆ ಮನೆಗೆ ಭೇಟಿ ನೀಡಿ ಜಾತಿ ಜನಗಣತಿ ಮಾಡುವ ಸಂದರ್ಭದಲ್ಲಿ ಪ್ರತಿ ಗ್ರಾಮದಲ್ಲಿರುವ ಛಲವಾದಿ ಸಮುದಾಯಗಳ ಜನರಿಗೆ ಅರಿವು ಮೂಡಿಸಿ, ಜಾತಿ ಕಲಂ ನಲ್ಲಿ ಛಲವಾದಿ ಅಥವಾ ಹೊಲೆಯ ಎಂದು ನಮುದಿಸಬೇಕೆಂದು ತಿಳಿಸಿದರು.
ಬಾಬಾಸಹೇಬ್ ಅಂಬೇಡ್ಕರ್ ಅವರ 134ನೇ ಜಯಂತಿಯನ್ನ ಎಲ್ಲಾ ತಾಲೂಕು, ಹೋಬಳಿ ಮತ್ತು ಗ್ರಾಮಗಳಲ್ಲಿ ವಿಜೃಂಭಣೆಯಿಂದ ಆಚರಿಸುವುದು, ಮುಂದಿನ ತಿಂಗಳು ಜಿಲ್ಲಾ ಮಟ್ಟದಲ್ಲಿ ಅಂಬೇಡ್ಕರ್ ಜಯಂತಿ ಆಚರಣೆಯನ್ನು ಎಲ್ಲಾ ಸಮುದಾಯಗಳನ್ನು ಒಳಗೊಡಿಸಿಕೊಂಡು ಅತ್ಯಂತ ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದರು.
ಹಿರಿಯ ಮುಖಂಡರಾದ ಗುಂಡಗತ್ತಿ ಕೊಟ್ರಪ್ಪ, ಜಿಲ್ಲಾ ಖಜಾಂಚಿ ಜೆಸಿ ಈರಣ್ಣ, ಸಣ್ಣ ಈರಪ್ಪ, ರಾಮಚಂದ್ರ ಬಾಬು, ಮರಿಸ್ವಾಮಿ, ಕೂಡ್ಲಿಗಿ ತಾಲೂಕು ಅಧ್ಯಕ್ಷ ಮಾರಪ್ಪ, ನಿವೃತ್ತ ಶಿಕ್ಷಕರಾದ ಚಂದ್ರಶೇಖರ, ಪ್ರಭಾಕರ್, ಛಲವಾದಿ ಕೇರಿ ಮುಖಂಡರಾದ ಮುದುಕಪ್ಪ, ರಾಮಕೃಷ್ಣ, ಟಿ ಬಿ ಡ್ಯಾಮ್ ರಮೇಶ್, ಶಿಕ್ಷಕರಾದ ಸುಗ್ಗನಳ್ಳಿ ರಮೇಶ್, ಹರಪನಹಳ್ಳಿಯ ಸಿ.ಅಜ್ಜಯ, ಕೊಟ್ರೇಶ್, ಹಗರಿಬೊಮ್ಮನಹಳ್ಳಿಯ ಪ್ರಕಾಶ್, ಗ್ರಾಮ ಪಂಚಾಯತಿ ಸದಸ್ಯರಾದ ರಮೇಶ್ಇತರರಿದ್ದರು.

# ಆಯೋಗದ ವರದಿಯಲ್ಲಿ ಲಂಚ ವ್ಯವಹಾರ ಪ್ರಸ್ತಾಪ

# ವಿಶೇಷ ತನಿಖಾ ತಂಡ ರಚನೆಗೆ ನಿರ್ಧಾರ

## ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘದ ಆರೋಪಗಳ ಕುರಿತ ವಿಚಾರಣಾ ಆಯೋಗದ ವರದಿ ಬಗ್ಗೆ ಸಚಿವಸಂಪುಟ ಚರ್ಚೆ: ಸಚಿವ ಎಚ್.ಕೆ.ಪಾಟೀಲ್ ಹೇಳಿಕೆ



**ಹಂಪಿ ಟೈಮ್ಸ್ ಬೆಂಗಳೂರು**
ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘದ ಆರೋಪಗಳ ಬಗ್ಗೆ ಗೌರವಾನ್ವಿತ ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನ್ ದಾಸ್ ಅವರ ನೇತೃತ್ವದ ವಿಚಾರಣಾ ಆಯೋಗದ ವರದಿಯನ್ನು ಆಧರಿಸಿ ಹೆಚ್ಚಿನ ತನಿಖೆ ನಡೆಸಲು ವಿಶೇಷ ತನಿಖಾ ತಂಡ ರಚಿಸಲು ಸಚಿವ ಸಂಪುಟ ತೀರ್ಮಾನ ಕೈಗೊಂಡಿದ್ದು, ಎರಡು ತಿಂಗಳೊಳಗಾಗಿ ತನ್ನ ವರದಿಯನ್ನು ನೀಡಲು ಸೂಚಿಸುವುದಾಗಿ ಕಾನೂನು ನ್ಯಾಯ, ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವರಾದ ಎಚ್.ಕೆ.ಪಾಟೀಲ್ ತಿಳಿಸಿದರು.
ಅವರು ಶುಕ್ರವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯ ನಂತರ ಕನ್ನಡ ಮತ್ತು ಸಂಸ್ಕೃತಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ್ ಎಸ್.ತಂಗಡಗಿ ಅವರೊಂದಿಗೆ ಮಾಧ್ಯಮಗೋಷ್ಠಿ ನಡೆಸಿ ಸಚಿವ ಸಂಪುಟ ನಿರ್ಣಯಗಳ ಬಗ್ಗೆ ಮಾಹಿತಿ ನೀಡಿದರು. ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘದ ಆರೋಪಗಳ ಬಗ್ಗೆ ಗೌರವಾನ್ವಿತ ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನ್ ದಾಸ್ ಅವರ ನೇತೃತ್ವದಲ್ಲಿ ವಿಚಾರಣಾ ಆಯೋಗ ತನ್ನ ವರದಿಯನ್ನು ಸಲ್ಲಿಸಿದ್ದು, ಸಚಿವ ಸಂಪುಟದಲ್ಲಿ ಈ ಬಗ್ಗೆ ಚರ್ಚೆ ನಡೆಸಲಾಗಿದೆ. ವಿಚಾರಣಾ ಆಯೋಗ ದೂರುಗಳ ಬಗ್ಗೆ ಮಾಹಿತಿಯನ್ನು ನೀಡಿದ್ದಾರೆ. 3 ಲಕ್ಷ ಕಾಮಗಾರಿಗಳಲ್ಲಿ ಪೈಕಿ ಆಯೋಗವು 1729 ಕಾಮಗಾರಿಗಳ ಬಗ್ಗೆ ವಿಸ್ತೃತವಾಗಿ ಪರಿಶೀಲನೆ ನಡೆಸಲಾಗಿದೆ. ಕೆಲವುಗಳಲ್ಲಿ ಕಾಮಗಾರಿಗಳಲ್ಲಿ ಅನುದಾನಕ್ಕಿಂತ ಹೆಚ್ಚು ಕಾಮಗಾರಿಯನ್ನು ನೀಡಲಾಗಿದೆ. ಕೆಲವುಗಳಲ್ಲಿ ಅಲ್ಪ ಅನುದಾನ ಬಿಡುಗಡೆಯಾಗಿದ್ದರೂ, ಅದಕ್ಕೂ ಮೀರಿದ ಪಾವತಿಯಾಗಿದೆ. ಕೆಲವುಗಳಲ್ಲಿ ಕಾಮಗಾರಿ ನಿರ್ವಹಿಸಿರುವುದರ ಬಗ್ಗೆ ಸಂಶಯವಿದೆ. ಕೆಲವುಗಳಲ್ಲಿ ಟೆಂಡರ್ ಪ್ರಕ್ರಿಯೆಯಲ್ಲಿ ಬೇರೆಯವರಿಂದ ಹಸ್ತಕ್ಷೇಪವಾಗಿರುವುದನ್ನು ಆಯೋಗವು ಮಾಹಿತಿ ತಿಳಿಸಿದೆ.
ಸಚಿವ ಸಂಪುಟ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿದೆ. ವಿಚಾರಣಾ ಆಯೋಗದ ವರದಿಯ ಮೇಲೆ ಎಸ್ ಐ ಟಿಯನ್ನು ರಚಿಸಲು ನಿರ್ಧರಿಸಲಾಗಿದ್ದು, ಇದರಲ್ಲಿ ಅಗತ್ಯವಿರುವ ಪರಿಣಿತರನ್ನು ನಿಯೋಜಿಸಿ, ಎರಡು ತಿಂಗಳಲ್ಲಿ ವರದಿಯನ್ನು ಸಲ್ಲಿಸಲು ಎಸ್‌ಐಟಿಗೆ ಸೂಚನೆ ನೀಡಲು ಸಚಿವಸಂಪುಟ ತೀರ್ಮಾನ ಕೈಗೊಂಡಿದ್ದು ಹಾಗೂ ಸಂಬಂಧಪಟ್ಟ ಇಲಾಖೆಯಿಂದ ಅಪೂರ್ಣ ಮಾಹಿತಿಗಳಿರುವ ಬಗ್ಗೆ ವಿಚಾರಣಾ ಆಯೋಗ ತಿಳಿಸಿರುವುದರಿಂದ, ಸಂಬಂಧಪಟ್ಟ ಇಲಾಖೆಯವರೂ ಎಸ್ ಐ ಟಿ ಯವರು ಈ ಬಗ್ಗೆ ಕೇಳುವ ಮಾಹಿತಿಗಳನ್ನು ಒದಗಿಸಲು ಸೂಚನೆಯನ್ನು ನೀಡಲಾಗಿದೆ ಎಂದರು.
40% ಕಮೀಷನ್‌ನ ವಿಚಾರ ವರದಿಯಲ್ಲಿ ಉಲ್ಲೇಖಿಸಲಾಗಿದೆಯೇ ಎಂಬ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸುತ್ತಾ, ಕಾಮಗಾರಿ ಗುತ್ತಿಗೆ ನೀಡುವ ವಿಚಾರದಲ್ಲಿ ಲಂಚ ವ್ಯವಹಾರ ನಡೆದಿರುವ ಬಗ್ಗೆ ಆಯೋಗದ ವರದಿಯಲ್ಲಿ ಪ್ರಸ್ತಾಪಿಸಲಾಗಿದೆ. ದೂರು ಬಂದಿರುವ ಇಲಾಖೆಗಳ ಕಾಮಗಾರಿಗಳ ಬಗ್ಗೆ ಆಯೋಗವು ಪರಿಶೀಲನೆ ನಡೆಸಿದೆ. ಆಯೋಗವು ಗುತ್ತಿಗೆದಾರ ದೂರುಗಳನ್ನು ಪರಿಗಣಿಸಿ, ವಿಚಾರಣೆ ನಡೆಸಿದೆ ಎಂದರು.

# ಸಿಇಟಿ ಪರೀಕ್ಷಾ ಕೇಂದ್ರಗಳ ಸುತ್ತ ನಿಷೇಧಾಜ್ಞೆ : ಡಿಸಿ ಆದೇಶ

**ಹಂಪಿ ಟೈಮ್ಸ್ ಬಳ್ಳಾರಿ**
ನಗರದ 11 ಪರೀಕ್ಷಾ ಕೇಂದ್ರಗಳಲ್ಲಿ ಏ.16 ಮತ್ತು 17 ರವರೆಗೆ ಸಾಮಾನ್ಯ ಪ್ರವೇಶ (ಸಿಇಟಿ-2025) ಪರೀಕ್ಷೆಗಳು ನಡೆಯಲಿದ್ದು, ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ಆವರಣವನ್ನು ಭಾರತೀಯ ನಾಗರಿಕ ಸುರಕ್ಷಾ ಸಂಹಿತಾ 2023 ರ ಕಲಂ 163 ರಡಿ ಮೇರೆಗೆ ನಿರ್ಬಂಧಿತ ಪ್ರದೇಶವೆಂದು ಘೋಷಿಸಿ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಆದೇಶಿಸಿದ್ದಾರೆ.
ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ಆವರಣದಲ್ಲಿನ ಜೆರಾಕ್ಸ್ ಸೆಂಟರ್ ಮತ್ತು ಇಂಟರ್‌ನೆಟ್ ಸೆಂಟರ್‌ಗಳನ್ನು ಕಾರ್ಯನಿರ್ವಹಿಸದಂತೆ ಪ್ರತಿಬಂಧಿಸಿ ಆದೇಶಿಸಿದ್ದಾರೆ.
ಆ ಪ್ರದೇಶದಲ್ಲಿ ಅನಧಿಕೃತ ವ್ಯಕ್ತಿ ಮತ್ತು ವ್ಯಕ್ತಿಗಳ ಗುಂಪುಗಳಿಗೆ ಪ್ರವೇಶವನ್ನು ನಿಷೇಧಿಸಿದೆ. ಈ ಆದೇಶವು ಪರೀಕ್ಷೆಯ ಮೇಲ್ವಿಚಾರಣೆ ಕಾರ್ಯನಿರ್ವಹಿಸುವ ಸಿಬ್ಬಂದಿಗಳಿಗೆ ಅನ್ವಯಿ ಸುವುದಿಲ್ಲ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

# ಏ.14 ರಂದು ಡಾ.ಬಿ.ಆರ್. ಅಂಬೇಡ್ಕರ್ ಜನ್ಮ ದಿನಾಚರಣೆ

**ಹಂಪಿ ಟೈಮ್ಸ್ ಬಳ್ಳಾರಿ**
ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ ಮತ್ತು ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ಭಾರತ ರತ್ನ, ಸಂವಿಧಾನ ಶಿಲ್ಪಿ ಡಾ.ಬಿ.ಆರ್ ಅಂಬೇಡ್ಕರ್ ಅವರ 134 ನೇ ಜನ್ಮ ದಿನಾಚರಣೆ ಕಾರ್ಯಕ್ರಮವನ್ನು ಏ.14 ರಂದು ಮಧ್ಯಾಹ್ನ 01 ಗಂಟೆಗೆ ನಗರದ ಡಾ.ರಾಜ್ ಕುಮಾರ್ ರಸ್ತೆಯ ಮುನಿಸಿಪಲ್ ಕಾಲೇಜು ಮೈದಾನದಲ್ಲಿ ಆಯೋಜಿಸಲಾಗಿದೆ.
ಬಳ್ಳಾರಿ ಉಸ್ತುವಾರಿ ಸಚಿವ ಬಿ.ಝಡ್.ಜಮೀರ್ ಅಹ್ಮದ್ ಖಾನ್ ಉದ್ಘಾಟಿಸುವರು. ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ ಮಹದೇವಪ್ಪ ಉಪಸ್ಥಿತರಿರುವರು. ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅಧ್ಯಕ್ಷತೆ ವಹಿಸುವರು. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಹಾಗೂ ಶಾಸಕ ಜೆ.ಎನ್ ಗಣೇಶ್, ಸಂಸದರಾದ ಈ.ತುಕಾರಾಂ, ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುಂಡರಗಿ ನಾಗರಾಜ, ಮಹಾನಗರ ಪಾಲಿಕೆಯ ಮಹಾಪೌರರಾದ ಮುಲ್ಲಂಗಿ ನಂದೀಶ್, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜೆ.ಎಸ್.ಆಂಜನೇಯಲು, ಜಿಲ್ಲಾ ಡಾ.ಬಿ.ಆರ್. ಅಂಬೇಡ್ಕರ್ ಸಂಘದ ಅಧ್ಯಕ್ಷ ಬಿ.ಕೆ. ಅನಂತ ಕುಮಾರ್ ಸೇರಿದಂತೆ ಇತರರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

# ಏ.15 ಕಬಡ್ಡಿ – ಕುಸ್ತಿ ಕ್ರೀಡೆ ವಿಶೇಷ ಆಯ್ಕೆ ಶಿಬಿರ

**ಹಂಪಿ ಟೈಮ್ಸ್ ದಾವಣಗೆರೆ**
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವತಿಯಿಂದ ಪ್ರಸಕ್ತ ಸಾಲಿಗೆ ಕ್ರೀಡಾ ವಸತಿ ಶಾಲೆ ಅಥವಾ ನಿಲಯಗಳಿಗೆ 8ನೇ ತರಗತಿ, ಪ್ರಥಮ ಪಿ.ಯು.ಸಿ. ಮಟ್ಟದ ಅರ್ಹ ಕ್ರೀಡಾಪಟುಗಳನ್ನು ಜಿಲ್ಲಾ ಹಾಗೂ ವಿಭಾಗ ಮಟ್ಟದಲ್ಲಿ ಈಗಾಗಲೇ ಆಯ್ಕೆ ಪ್ರಕ್ರಿಯೆ ನಡೆಸಲಾಗಿದೆ. ಈ ಆಯ್ಕೆ ಪ್ರಕ್ರಿಯೆಯಲ್ಲಿ ವಿವಿಧ ಕಾರಣಗಳಿಂದ ಭಾಗವಹಿಸಲು ಸಾಧ್ಯವಾಗದ ಅಭ್ಯರ್ಥಿಗಳಿಗೆ ಇದೇ ಏಪ್ರಿಲ್ 15 ರಂದು ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ "ವಿಶೇಷ ಆಯ್ಕೆ ಶಿಬಿರ" ಆಯೋಜನೆ ಮಾಡಲಾಗಿದೆ.
ಪ್ರವೇಶ ಬಯಸುವ ಆಸಕ್ತ ಅರ್ಹ ಅಭ್ಯರ್ಥಿಗಳು ಏ.15 ರ ಬೆಳಿಗ್ಗೆ 9.30 ಕ್ಕೆ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯುವ ಕಬಡ್ಡಿ ಮತ್ತು ಕುಸ್ತಿ ಕ್ರೀಡೆಗಳ "ವಿಶೇಷ ಆಯ್ಕೆ ಶಿಬಿರ" ದಲ್ಲಿ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ 08192-237480ಗೆ ಸಂಪರ್ಕಿಸಬಹುದು ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಏ.15 ರಂದು ಎಸ್ಸೆಸ್ಸೆಲ್ಸಿ ನಂತರ ಮುಂದೇನು

## ಉಚಿತ ತರಬೇತಿ ಕಾರ್ಯಾಗಾರ

**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**
ತಾಲೂಕಿನ ಹಗರಿಬೊಮ್ಮನಹಳ್ಳಿ ವಾಲ್ಮೀಕಿ ಭವನದಲ್ಲಿ ಏ.15 ರಂದು ಬೆ.9:30 ಗಂಟೆಗೆ ತಾಲೂಕು ಮಟ್ಟದ ವೃತ್ತಿ ಮಾರ್ಗದರ್ಶನ ಕಾರ್ಯಕ್ರಮದಡಿ ಎಸ್ಸೆಸ್ಸೆಲ್ಸಿ ನಂತರ ಮುಂದೇನು, ಉಚಿತ ತರಬೇತಿ ಕಾರ್ಯಗಾರ ಹಮ್ಮಿಕೊಳ್ಳಲಾಗಿದೆ ಎಂದು ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (ಜಿಟಿಟಿಸಿ)ದ ಪ್ರಾಚಾರ್ಯ ಅಂಜನ್ ಕುಮಾರ್ ತಿಳಿಸಿದ್ದಾರೆ.
ವಿದ್ಯಾರ್ಥಿಗಳು ಮತ್ತು ಪೋಷಕರಿಗೆ 'ಎಸ್ಸೆಸ್ಸೆಲ್ಸಿ ನಂತರ ಮುಂದೇನು?' ಎಂಬ ಗೊಂದಲದ ಪರಿಹಾರಕ್ಕಾಗಿ ಈ ತರಬೇತಿ ಕಾರ್ಯಾಗಾರವನ್ನು ಏರ್ಪಡಿಸಲಾಗಿದೆ. ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತುದಾರ ವಿ.ಎಂ.ಗವಿಸಿದ್ದೇಶ್ ಕಡಲಬಾಳು ಇವರು ಮಾರ್ಗದರ್ಶನ ನೀಡಲಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಹಾಗೂ ಪೋಷಕರು ಭಾಗವಹಿಸಿ ತರಬೇತಿ ಕಾರ್ಯಾಗಾರವನ್ನು ಸದುಪಯೋಗಪಡಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಉಪನ್ಯಾಸಕ ಟಿ.ಮಂಜುನಾಥ ಮೊ.9741153563, ದ್ವಿದಸ ಎಂ.ಅಭಿಷೇಕ್ ಮೊ.9353897720 ಸಂಪರ್ಕಿಸಲು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅರಿವು ಕೇಂದ್ರದ ಮೇಲ್ವಿಚಾರಕ ಅಯ್ಕೆ ಪಟ್ಟಿ ಪ್ರಕಟ : ಆಕ್ಷೇಪಣೆಗೆ ಅವಕಾಶ

**ಹಂಪಿ ಟೈಮ್ಸ್ ಹೊಸಪೇಟೆ**
ಜಿಪಂ ವ್ಯಾಪ್ತಿಯ ಹಗರಿಬೊಮ್ಮನಹಳ್ಳಿ ತಾಲೂಕಿನ ಗದ್ದಿಕೇರಿ ಗ್ರಾಪಂ ಅರಿವು ಕೇಂದ್ರದ ಮೇಲ್ವಿಚಾರಕರ ಹುದ್ದೆಯ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಜಿಪಂ ವೆಬ್‌ಸೈಟ್ http://zpvijayanagara.karnataka.gov.in ಹಾಗೂ http://vijayanagara.nic.in ನಲ್ಲಿ ಪ್ರಕಟಿಸಲಾಗಿದೆ. ಆಯ್ಕೆ ಬಗ್ಗೆ ಆಕ್ಷೇಪಣೆಗಳಿದ್ದಲ್ಲಿ ಸಲ್ಲಿಸಲು ಅವಕಾಶ ನೀಡಲಾಗಿದ್ದು, ಮೇ.7 ರಂದು ಮಧ್ಯಾಹ್ನ 1:30 ರೊಳಗಾಗಿ ಅಗತ್ಯ ದಾಖಲಾತಿಗಳೊಂದಿಗೆ ಲಿಖಿತ ರೂಪದಲ್ಲಿ ಸದಸ್ಯ ಕಾರ್ಯದರ್ಶಿ, ಆಯ್ಕೆ ಸಮಿತಿ ಹಾಗೂ ಉಪಕಾರ್ಯದರ್ಶಿ, ಜಿಲ್ಲಾ ಪಂಚಾಯಿತಿ ವಿಜಯನಗರ, ಜಿಲ್ಲಾಧಿಕಾರಿಗಳ ಕಟ್ಟಡ, ಟಿಬಿಡ್ಯಾಂ ರಸ್ತೆ, ಹೊಸಪೇಟೆ-583225 ಈ ವಿಳಾಸಕ್ಕೆ ನೊಂದಣಿ ಅಂಚೆ ಮೂಲಕ ಅಥವಾ ಖುದ್ದಾಗಿ ಜಿಪಂ ಕಚೇರಿಗೆ ಸಲ್ಲಿಸಬಹುದಾಗಿದೆ ಎಂದು ಜಿಪಂ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ನೊಂಗ್ಜಾಯ್ ಮೊಹಮ್ಮದ್ ಅಕ್ರಮ್ ಅಲಿ ಷಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವ ಬಿ.ಎಸ್ ಸುರೇಶ್ ಪ್ರವಾಸ ಕಾರ್ಯಕ್ರಮ

**ಹಂಪಿ ಟೈಮ್ಸ್ ಬಳ್ಳಾರಿ**
ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವ ಬಿ.ಎಸ್ ಸುರೇಶ್ ಅವರು ಏ.13 ರಂದು ಬಳ್ಳಾರಿ ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳುವರು.
ಏ.13 ರಂದು ಬೆಳಿಗ್ಗೆ 10 ಗಂಟೆಗೆ ಬೆಂಗಳೂರಿನಿಂದ ಹೆಲಿಕಾಪ್ಟರ್ ಮೂಲಕ ಹೊರಟು ಬೆಳಿಗ್ಗೆ 11 ಗಂಟೆಗೆ ಕುರುಗೋಡು ತಾಲ್ಲೂಕಿನ ಕಲ್ಲುಕಂಬ ಗ್ರಾಮಕ್ಕೆ ಆಗಮಿಸುವರು. ಬಳಿಕ ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 02 ಗಂಟೆವರೆಗೆ ಶ್ರೀ ಭಕ್ತ ಕನಕದಾಸರ ಮತ್ತು ಸಂಗೊಳ್ಳಿ ರಾಯಣ್ಣರ ಪುತ್ಥಳಿ ಉದ್ಘಾಟನೆ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಮಧ್ಯಾಹ್ನ 03 ಗಂಟೆಗೆ ಕಲ್ಲುಕಂಭ ಗ್ರಾಮದಿಂದ ಬೆಂಗಳೂರಿಗೆ ತೆರಳುವರು ಎಂದು ಸಚಿವರ ವಿಶೇಷ ಕರ್ತವ್ಯಾಧಿಕಾರಿ ಅವರು ತಿಳಿಸಿದ್ದಾರೆ.

# ಸಮಾಜ ಕಲ್ಯಾಣ ಇಲಾಖೆ: ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**
ಜಿಲ್ಲೆಯಲ್ಲಿನ ಪರಿಶಿಷ್ಟ ಜಾತಿಯ 2025-26ನೇ ಸಾಲಿನ 50 ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಷ್ಠಿತ ಶಾಲೆಗಳಲ್ಲಿ 6 ನೇ ತರಗತಿ ಪ್ರವೇಶಕ್ಕೆ ಅರ್ಹತಾ ಪರೀಕ್ಷೆಯ ಮೂಲಕ ಆಯ್ಕೆ ಮಾಡಲು ಅರ್ಜಿ ಆಹ್ವಾನಿಸಲಾಗಿದೆ.
ಪ್ರತಿಷ್ಠಿತ ಶಾಲೆಗಳಾದ ಶ್ರೀ ವಿಶ್ವೇಶ್ವರಯ್ಯ ಪ್ರೌಢ ಶಾಲೆ ಅಲ್ಲೀಪುರ (ಬೆಸ್ಟ್ ಸ್ಕೂಲ್), ಶ್ರೀ ನಂದ ವಸತಿ ಶಾಲೆ ವಿದ್ಯಾನಗರ, ಶ್ರೀ ನಂದಿ ಪ್ರೌಢಶಾಲೆ (ಸಿಬಿಎಸ್‌ಇ) ಬೆಳಗಲ್ ಕ್ರಾಸ್, ವಿಜಯಮೇರಿ ಪ್ರಾಥಮಿಕ ಶಾಲೆ ಸಿರುಗುಪ್ಪ (ವಸತಿ ಸಹಿತ), ಬೃಂದಾ ಇಂಟರ್ ನ್ಯಾಷನಲ್ ಸ್ಕೂಲ್ ದಮ್ಮೂರು(ವಸತಿ ಸಹಿತ) ಶಾಲೆಗಳಿಗೆ ಏ.15 ರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಪ್ರವೇಶ ಪರೀಕ್ಷೆ ಬರೆಯಲು ಇಚ್ಛಿಸುವ ಪರಿಶಿಷ್ಟ ಜಾತಿಯ ಅರ್ಹ ವಿದ್ಯಾರ್ಥಿಗಳು ಅರ್ಜಿಗಳನ್ನು ಸಮಾಜ ಕಲ್ಯಾಣಧಿಕಾರಿಗಳ ಕಚೇರಿಯಲ್ಲಿ ಪಡೆದುಕೊಳ್ಳಬಹುದು ಅರ್ಜಿ ಸಲ್ಲಿಸಲು ಮೇ.03 ಕೊನೆಯ ದಿನವಾಗಿದೆ.
**ಅರ್ಹತೆಗಳು:** ಪರಿಶಿಷ್ಟ ಜಾತಿಯ ವಿದ್ಯಾರ್ಥಿಯಾಗಿರಬೇಕು.
ಅಭ್ಯರ್ಥಿಯ ಕುಟುಂಬದ ಆದಾಯ ರೂ.2.00 ಲಕ್ಷದ ಒಳಗಿರಬೇಕು. ಅಭ್ಯರ್ಥಿ 5ನೇ ತರಗತಿಯಲ್ಲಿ ಕನಿಷ್ಠ ಶೇ.60 ಅಂಕ ಪಡೆದಿರಬೇಕು.
**ಬೇಕಾದ ದಾಖಲೆಗಳು:** ವಿದ್ಯಾರ್ಥಿಯ ಆಧಾರ್ ಕಾರ್ಡ, ದೂರವಾಣಿ ಸಂಖ್ಯೆ, ಪಾಸ್‌ಪೋರ್ಟ್ ಸೈಜ್ 2 ಫೋಟೋ, ಜಾತಿ ಪ್ರಮಾಣ ಪತ್ರ, ಆದಾಯ ಪ್ರಮಾಣ ಪತ್ರ, 5ನೇ ತರಗತಿ ಅಂಕಪಟ್ಟಿ, ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ, ಮುಖ್ಯೋಪಾಧ್ಯಾಯರಿಂದ ನಡತೆ ಪ್ರಮಾಣ ಪತ್ರ. ಹೆಚ್ಚಿನ ಮಾಹಿತಿಗಾಗಿ ದೂ.08392-244738, ಮೊ.9480843073 ಅಥವಾ 1ನೇ ಗೇಟ್ ಹತ್ತಿರ ಅಂಬೇಡ್ಕರ್ ಭವನದ ಸಮಾಜ ಕಲ್ಯಾಣಧಿಕಾರಿಗಳ ಕಚೇರಿಗೆ ಭೇಟಿ ನೀಡಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



For Events Ads & News Coverage
Contact: M: 94486 33038
www.hampitimes.com /epaper.hampitimes.com

## ನಿತ್ಯ ಪಂಚಾಂಗ

ಮಾಸ: ಚೈತ್ರ । ಸಂವತ್ಸರ: ವಿಶ್ವಾವಸು

**12-04-2025 – ಶನಿವಾರ**

| | |
|---|---|
| ತಿಥಿ | : ಹುಣ್ಣಿಮೆ |
| ಪಕ್ಷ | : ಶುಕ್ಲ |
| ನಕ್ಷತ್ರ | : ಹಸ್ತ |
| ಯೋಗ | : ವ್ಯಾಘಾತ |
| ಕರಣ | : ವಿಷ್ಟಿ |
| ಸೂರ್ಯೋದಯ | : 06:10:11 |
| ಸೂರ್ಯಾಸ್ತ | : 18:45:25 |
| ರಾಹು ಕಾಲ | : 9:19–10:53 |
| ಯಮಘಂಡ ಕಾಲ | : 14:02–15:37 |
| ಗುಳಿಕ ಕಾಲ | : 06:10–07:45 |



## ತುಂಗಭದ್ರಾ ನೀರಿನ ಮಟ್ಟ

ಶುಕ್ರವಾರ : 11-04-2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1585.14 ಅಡಿ |
| ಒಳ ಹರಿವು | 1269 ಕ್ಯುಸೆಕ್ |
| ಹೊರ ಹರಿವು | 1246 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 7.417 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1579.07 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 171 ಕ್ಯುಸೆಕ್ |
| ಸಾಮರ್ಥ್ಯ | 4.034 ಟಿಎಂಸಿ |

ನಿರಂತರ ಪ್ರಯತ್ನ ನಿಮ್ಮನ್ನು ಎಂದೂ ಸೋಲಲು ಬಿಡುವುದಿಲ್ಲ.

# ಪೋಕ್ಸೋ-ಬಾಲ್ಯ ವಿವಾಹ ತಡೆಗೆ ನಿಗಾ ಸಮಿತಿ

## ನಾಲ್ಕು ಹಂತದಲ್ಲಿ ಜಾರಿ ತಂಡಗಳ ರಚನೆ । ಗ್ರಾಮಕ್ಕೊಂದು ನಿಗಾ ಸಮಿತಿ ರಚನೆಗೆ ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಸೂಚನೆ

■ **ಹಂಪಿ ಟೈಮ್ಸ್ ಚಿತ್ರದುರ್ಗ**

ಜಿಲ್ಲೆಯಲ್ಲಿ ಪೋಕ್ಸೋ ಹಾಗೂ ಬಾಲ್ಯ ವಿವಾಹ ಪ್ರಕರಣಗಳ ತಡೆಗೆ ಸಮಗ್ರ ಯೋಜನೆ ರೂಪಿಸುವುದರೊಂದಿಗೆ ಹಳ್ಳಿ, ಗ್ರಾಮ ಪಂಚಾಯಿತಿ, ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಜಾರಿ ತಂಡಗಳನ್ನು ರಚನೆ ಮಾಡುವಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಮಕ್ಕಳ ರಕ್ಷಣಾ ಘಟಕದ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಸೂಚಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಶುಕ್ರವಾರ ಬಾಲ್ಯ ವಿವಾಹ, ಪೋಕ್ಸೋ ಮತ್ತು ಮಕ್ಕಳ ಮೇಲಿನ ದೌರ್ಜನ್ಯ ತಡೆಗಟ್ಟುವ ಸಲುವಾಗಿ ಪೊಲೀಸ್ ಸೇರಿದಂತೆ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳ ಜೊತೆ ಸಭೆ ನಡೆಸಿ ಅವರು ಮಾತನಾಡಿದರು.

ಪೋಕ್ಸೋ ಹಾಗೂ ಬಾಲ್ಯ ವಿವಾಹ ಹಾಗೂ ಬಾಲ ಗರ್ಭಿಣಿ ಪ್ರಕರಣಗಳು ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬೆಳಕಿಗೆ ಬರುತ್ತಿವೆ. ಇವುಗಳನ್ನು ತಡೆಗಟ್ಟಲು ಚುನಾವಣೆಯ ಮತದಾನ ಜಾಗೃತಿ ಮಾದರಿಯಲ್ಲಿ ಪ್ರತಿ ಮನೆ ಮನೆಗಳಿಗೂ ತೆರಳಿ ವ್ಯಾಪಕವಾಗಿ ಜಾಗೃತಿ ಮೂಡಿಸುವ ಕೆಲಸವಾಗಬೇಕು. ಪ್ರತಿ ಹಳ್ಳಿಗಳಲ್ಲಿ ಆಶಾ, ಅಂಗನವಾಡಿ ಕಾರ್ಯಕರ್ತೆ, ಗ್ರಾಮ ಸಹಾಯಕ, ಆರ್.ಡಿ.ಪಿ.ಆರ್ ಸಿಬ್ಬಂದಿ, ಬೀಟ್ ಪೊಲೀಸ್, ಸ್ಥಳೀಯ ಶಾಲೆಯ ಮುಖ್ಯ ಶಿಕ್ಷಕ ಹಾಗೂ ಹಾಸ್ಟೆಲ್ ವಾರ್ಡ್‌ಗಳ ನೇತೃತ್ವದಲ್ಲಿ ಜಾರಿ ತಂಡಗಳನ್ನು ರಚಿಸಬೇಕು. ಈ ತಂಡಗಳು ಪ್ರತಿ ಮನೆ ಮನೆಗೆ ತೆರಳಿ ಪೋಕ್ಸೋ ಹಾಗೂ ಬಾಲ್ಯ ವಿವಾಹ ನಿಷೇಧ ಕಾಯ್ದೆ ಕುರಿತು ಅರಿವು ಮೂಡಿಸುವುದರೊಂದಿಗೆ ಮಾಹಿತಿ ಸಂಗ್ರಹಿಸಬೇಕು. ಈ ತಂಡಗಳ ಮೇಲುಸ್ತುವಾರಿಗೆ ಗ್ರಾಮ ಪಂಚಾಯಿತಿ ಹಂತದಲ್ಲಿ ಪಿಡಿಓ, ರಾಜಸ್ವ ನಿರೀಕ್ಷಕ, ಕ್ಷೇತ್ರ ಸಂಪನ್ಮೂಲ ವ್ಯಕ್ತಿ, ವಾರ್ಡನ್, ಸಬ್ ಇನ್ಸ್‌ಪೆಕ್ಟರ್, ಪ್ರಾಥಮಿಕ ಆರೋಗ್ಯ ಕೇಂದ್ರ ಅಧಿಕಾರಿ, ಹಾಗೂ ಅಂಗನವಾಡಿ ಮೇಲ್ವಿಚಾರಕರ ನೇತೃತ್ವದಲ್ಲಿ ಎರಡನೇ ಹಂತದ ಜಾರಿ ತಂಡ ರಚಿಸಬೇಕು. ಈ ತಂಡ ಹಳ್ಳಿಗಳ ಜಾರಿ ತಂಡದಿಂದ ಪ್ರತಿದಿನ ಮಾಹಿತಿ ಪಡೆದು ವಾರಕೊಮ್ಮೆ ಸಭೆ ನಡೆಸಬೇಕು. ತಮ್ಮ ವ್ಯಾಪ್ತಿಯಲ್ಲಿ ಯಾವುದೇ ಪೋಕ್ಸೋ ಹಾಗೂ ಬಾಲ್ಯ ವಿವಾಹ ಪ್ರಕರಣಗಳು ನಡೆಯದಂತೆ ತಡೆಯಬೇಕು.

ತಾಲ್ಲೂಕು ಮಟ್ಟದಲ್ಲಿ ತಹಶೀಲ್ದಾರ್ ನೇತೃತ್ವದಲ್ಲಿ ಜಾರಿ ತಂಡ ರಚಿಸಬೇಕು. ಇದರಲ್ಲಿ ತಾ.ಪಂ.ಇಓ, ಸಿಡಿಪಿಓ, ಬಿಇಓ, ಸಿಪಿಐ, ತಾಲ್ಲೂಕು ಆರೋಗ್ಯಾಧಿಕಾರಿ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು, ಸೇರಿದಂತೆ ಇತರೆ ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳು ಇರಬೇಕು. ಪ್ರತಿ ತಾಲ್ಲೂಕಿಗೂ ಜಿಲ್ಲಾ ಮಟ್ಟದ ಅಧಿಕಾರಿಯನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಬೇಕು. ತಾಲ್ಲೂಕು ಹಂತದ ತಂಡ ಪ್ರತಿ 15 ದಿನಗಳಿಗೊಮ್ಮೆ ಬಾಲ್ಯ ವಿವಾಹ ಹಾಗೂ ಪೋಕ್ಸೋ ಪ್ರಕರಣಗಳ ಕುರಿತು ಸಭೆ ನಡೆಸಬೇಕು ಎಂದರು.



> ಚಿತ್ರದುರ್ಗ ಜಿಲ್ಲೆಯಲ್ಲಿ 2022-23ನೇ ಸಾಲಿನಲ್ಲಿ 93, 2023-24ನೇ ಸಾಲಿನಲ್ಲಿ 131, 2024-25ನೇ ಸಾಲಿನಲ್ಲಿ 150 ಹಾಗೂ 2025-26ನೇ ಸಾಲಿನಲ್ಲಿ ಪ್ರಸ್ತುತ 21 ಪೋಕ್ಸೋ ಪ್ರಕರಣಗಳು ದಾಖಲಾಗಿವೆ. ಜಿಲ್ಲೆಯಲ್ಲಿ ದಾಖಲಾದ ಈವರೆಗಿನ ಪೋಕ್ಸೋ ಪ್ರಕರಣಗಳಲ್ಲಿ 18 ತುಂಬಿದ ಹಾಗೂ 30 ವರ್ಷದ ಒಳಗಿನ ಆರೋಪಿಗಳೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಹಲವು ಪ್ರಕರಣಗಳಲ್ಲಿ ಪೋಕ್ಸೋ ಕಾಯ್ದೆಯ ಅರಿವು ಇಲ್ಲದೇ ತಪ್ಪು ಮಾಡಿ, ಶಿಕ್ಷೆ ಅನುಭವಿಸುತ್ತಿದ್ದಾರೆ. ಜಿಲ್ಲೆಯಲ್ಲಿ ಈ ಪಿಡುಗುಗಳನ್ನು ತೊಡೆದು ಹಾಕಲು ವಿನೂತನ ರೀತಿಯ ಕಾರ್ಯಕ್ರಮಗಳನ್ನು ಆಯೋಜಿಸಬೇಕು
>
> – ರಂಜಿತ್ ಕುಮಾರ್ ಎಸ್ಪಿ

ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿ, ಸಿಇಓ, ಎಸ್.ಪಿ, ಡಿವೈಎಸ್‌ಪಿ, ಸೇರಿದಂತೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಶಿಕ್ಷಣ, ಪಿಯು, ಸಮಾಜ ಕಲ್ಯಾಣ, ಆರೋಗ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳ ಕೋರ್ ಕಮಿಟಿ ರಚಿಸಬೇಕು. ಈ ಸಮಿತಿ 30 ದಿನಗಳಿಗೊಮ್ಮೆ ಪರಿಶೀಲನೆ ಸಭೆ ನಡೆಸಿ ಮಾಹಿತಿ ಪಡೆದುಕೊಂಡು ಸೂಕ್ತ ಸಲಹೆ ಸೂಚನೆಗಳನ್ನು ಸಹ ನೀಡಬೇಕು ಎಂದು ಜಿಲ್ಲಾಧಿಕಾರಿ ಟಿ.ವೆಂಕಟೇಶ್ ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್ ಬಂಡಾರು ಮಾತನಾಡಿ, ಬಾಲ್ಯ ವಿವಾಹ ಮತ್ತು ಪೋಕ್ಸೋ ಪ್ರಕರಣಗಳು ಜಿಲ್ಲೆಯಲ್ಲಿ ಹೆಚ್ಚು ಚರ್ಚೆಯಾಗುತ್ತಿವೆ. ಈ ಪಿಡುಗಳು ಜಿಲ್ಲೆಯಲ್ಲಿ ಹೆಚ್ಚಾಗಲು ಸಾಮಾಜಿಕ ಹಾಗೂ ಆರ್ಥಿಕ ಕಾರಣಗಳು ಇವೆ. ಚಿತ್ರದುರ್ಗ ಜಿಲ್ಲಾ ಪೊಲೀಸ್ ವತಿಯಿಂದ CAP-SECUR (Comprehensive Approach to Prevent- Sexual Explotation, Child-marriages & to Uplift the Right of-Children) ಎನ್ನುವ ವಿನೂತನ ಕಾರ್ಯಕ್ರಮ ಜಾರಿಗೊಳಿಸಲಾಗುತ್ತದೆ. ಇತರೆ ಇಲಾಖೆ ಹಾಗೂ ಸರ್ಕಾರೇತರ ಸಂಸ್ಥೆಗಳ ಸಹಯೋಗದಲ್ಲಿ ತಂಡಗಳನ್ನು ರಚಿಸಿ, ಸಮಾಜದ ಅತ್ಯಂತ ದುಸ್ತರದಲ್ಲಿರುವ ಸ್ಥಳಗಳಲ್ಲಿ ಮಕ್ಕಳನ್ನು ಲೈಂಗಿಕ ಶೋಷಣೆ ಹಾಗೂ ಬಲವಂತದ ಮದುವೆಯಿಂದ ಪಾರು ಮಾಡಿ, ಮಕ್ಕಳ ಹಕ್ಕುಗಳನ್ನು ರಕ್ಷಿಸುವ ಗುರಿ ಹೊಂದಲಾಗಿದೆ.

ಬಾಲ್ಯ ವಿವಾಹ ಹಾಗೂ ಪೋಕ್ಸೋ ಪ್ರಕರಣಗಳ ತಡೆಗೆ ಸಮಾಜ ಕಲ್ಯಾಣ ಇಲಾಖೆ, ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಪೊಲೀಸ್ ಇಲಾಖೆ ಸೇರಿ ವಿವಿಧ ಇಲಾಖೆಗಳು ಮುನ್ನೆಚ್ಚರಿಕೆ ವಹಿಸಬೇಕು. ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಅರಿವು ಮೂಡಿಸಲು ವಿಶೇಷ ಗಮನಹರಿಸಬೇಕು. ಶಾಲಾ-ಕಾಲೇಜುಗಳಲ್ಲಿ ಹೆಚ್ಚಿನ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಕಲಾವಿದರ ಮೂಲಕ ಗ್ರಾಮಗಳಲ್ಲಿ ಕಿರು ನಾಟಕಗಳನ್ನು ಏರ್ಪಡಿಸಿ, ಮನಮುಟ್ಟುವಂತೆ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ನಡೆಸಬೇಕಿದೆ ಎಂದು ತಿಳಿಸಿದ ಅವರು, ಇನ್ನು ಮುಂದೆ ಪೋಕ್ಸೋ, ಬಾಲ್ಯ ವಿವಾಹ ಪ್ರಕರಣಗಳು ವರದಿಯಾದರೆ ಆಶಾ ಕಾರ್ಯಕರ್ತೆಯರು, ಸಂಬಂಧಪಟ್ಟ ಪೊಲೀಸ್ ಠಾಣಾ ವ್ಯಾಪ್ತಿಯ ಬೀಟ್ ಪೊಲೀಸರು, ಕ್ಷೇತ್ರ ಮಟ್ಟದ ಅಧಿಕಾರಿಗಳು ಪ್ರಕರಣದ ಸಂಪೂರ್ಣ ಹಿನ್ನಲೆ ವರದಿಯನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಬೇಕಾಗುತ್ತದೆ ಎಂದು ಹೇಳಿದರು.

ಬಾಲ್ಯ ವಿವಾಹ, ಬಾಲ ಗರ್ಭಿಣಿ, ಪೋಕ್ಸೋ, ದೌರ್ಜನ್ಯ ತಡೆ ಕಾಯ್ದೆಗಳ ಕುರಿತು ಕರಪತ್ರಗಳನ್ನು ಮುದ್ರಿಸಿ, ಪ್ರತಿ ಮನೆಗಳಿಗೆ ಹಂಚುವ ಮೂಲಕ ಜಾಗೃತಿ ಮೂಡಿಸಬೇಕು ಎಂದು ಅಧಿಕಾರಿಗಳಿಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್ ಬಂಡಾರು ಸಲಹೆ ನೀಡಿದರು.

ಬಾಲ್ಯ ವಿವಾಹ, ಬಾಲಕಾರ್ಮಿಕ ಹಾಗೂ ಪೋಕ್ಸೋ ಪ್ರಕರಣಗಳಿಗೆ ಸಂಬಂಧಿಸಿದಂತೆ ಮಕ್ಕಳಿಗೆ ಜಾಗೃತಿ ಕಾರ್ಯಕ್ರಮಗಳ ಮೂಲಕ ಅರಿವು ಮೂಡಿಸಲಾಗುತ್ತಿದೆ ಎಂದು ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಂ.ಆರ್.ಮಂಜುನಾಥ್ ಸಭೆಗೆ ಮಾಹಿತಿ ನೀಡಿದರು. ಶಾಲೆಗೆ ಗೈರಾದ ಮಕ್ಕಳ ಮಾಹಿತಿಯನ್ನು ನೀಡುವಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್ ಬಂಡಾರು ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ತಿಳಿಸಿದರು.

ಪ್ರತಿ ಗ್ರಾಮದಲ್ಲೂ ನಿಗಾ ಸಮಿತಿ ರಚಿಸಬೇಕು. ಪ್ರಕರಣ ಜರುಗಿದ ತಕ್ಷಣ ಗಮನಕ್ಕೆ ಬರುವಂತೆ ನಿರ್ವಹಣೆ ಆಗಬೇಕು. ಈ ಸಮಿತಿಗೆ ನಿಯಮಿತವಾಗಿ ಮಾನಿಟರಿಂಗ್ ಮಾಡುವ ಮೂಲಕ ವರದಿ ಪಡೆದುಕೊಳ್ಳಬೇಕು. ಅಧಿಕಾರಿಗಳು ವ್ಯವಸ್ಥಿತವಾಗಿ ಕಾರ್ಯನಿರ್ವಹಿಸಬೇಕು ಎಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ, ಪೊಲೀಸ್ ಉಪಾಧೀಕ್ಷಕ ಪಿ.ಕೆ. ದಿನಕರ್, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಜಗದೀಶ್ ಹೆಬ್ಬಳ್ಳಿ, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಜಿ.ಪಿ.ರೇಣುಪ್ರಸಾದ್, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಎಸ್.ಪಿ.ರವೀಂದ್ರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕಿ ಭಾರತಿ ಆರ್ ಬಣಕಾರ್, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಸಿ.ಸವಿತಾ ಸೇರಿದಂತೆ ಎನ್‌ಜಿಓ ಪ್ರತಿನಿಧಿಗಳು ಇದ್ದರು.

